ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ,
ನೃಪತುಂಗ ರಸ್ತೆ,
ಬೆಂಗಳೂರು–560 001

# ವಾರ್ಷಿಕ ವರದಿ 2011–12

# ವಾರ್ಷಿಕ ವರದಿ 2011–12

ಕರ್ನಾಟಕ ರಾಜ್ಯದಲ್ಲಿ ಪೂರ್ವ ಪ್ರಾಥಮಿಕ ಶಿಕ್ಷಣದಿಂದ ಪ್ರೌಢ ಶಿಕ್ಷಣದವರೆಗಿನ ಶಾಲಾ ಶಿಕ್ಷಣವು ಸಾರ್ವಜನಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಬರುತ್ತದೆ. ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರು ಇಲಾಖಾ ಮುಖ್ಯಸ್ಥರಾಗಿರುತ್ತಾರೆ. ಇಲಾಖೆಯ ಆಡಳಿತ ಮತ್ತು ನಿರ್ವಹಣೆಯ ಜವಾಬ್ದಾರಿಯನ್ನು ಆಯುಕ್ತರು ಹೊಂದಿರುತ್ತಾರೆ. 2003–04ರಲ್ಲಿ ಧಾರವಾಡ ಮತ್ತು ಗುಲ್ಬರ್ಗಾ ವಿಭಾಗಗಳಲ್ಲಿ ಸರ್ಕಾರವು ಅಪರ ಆಯುಕ್ತರನ್ನು ನೇಮಿಸಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತಾಲಯಗಳನ್ನು ಪ್ರಾರಂಬಿಸಿ ಅಧಿಕಾರವನ್ನು ವಿಕೇಂದ್ರಿಕರಿಸಲಾಗಿದೆ. ಈ ಎರಡು ನಿರ್ದೇಶನಾಲಯಗಳಿಗೆ ಒಬ್ಬ ನಿರ್ದೇಶಕರ ಹಂತದ ಅಧಿಕಾರಿ ಆಯುಕ್ತಾಲಯದಲ್ಲಿ ಕಾರ್ಯ ನಿರ್ವಹಿಸುವರು. ಕೇಂದ್ರಾಲಯದಲ್ಲಿನ ಆಯುಕ್ತರು ಬೆಂಗಳೂರು ಮತ್ತು ಮೈಸೂರು ವಿಭಾಗದಲ್ಲಿನ ಆಡಳಿತವನ್ನು ನೋಡುವುದರ ಜೊತೆಗೆ ಶಿಕ್ಷಣ ಇಲಾಖೆಯ ನೀತಿ ನಿರೂಪಣೆಯ ಉಸ್ತುವಾರಿ ಮಾಡುವುದಲ್ಲದೆ ಅವರ ಅಧೀನದಲ್ಲಿ 7 ನಿರ್ದೇಶನಾಲಯಗಳು ನೇರ ಆಡಳಿತಕ್ಕೆ ಒಳಪಟ್ಟಿವೆ.

ಅವುಗಳೆಂದರೆ.

1. ನಿರ್ದೇಶಕರು (ಪ್ರಾಥಮಿಕ ಶಿಕ್ಷಣ)
2. ನಿರ್ದೇಶಕರು (ಪ್ರೌಢ ಶಿಕ್ಷಣ)
3. ನಿರ್ದೇಶಕರು, (ಉರ್ದು ಮತ್ತು ಇತರೆ ಭಾಷಾ ಅಲ್ಪಸಂಖ್ಯಾತರು)
4. ನಿರ್ದೇಶಕರು, (ರಾಜ್ಯಶಿಕ್ಷಣ ಸಂಶೋಧನೆ ಮತ್ತು ತರಬೇತಿ)
5. ವ್ಯವಸ್ಥಾಪಕ ನಿರ್ದೇಶಕರು, (ಪಠ್ಯಪುಸ್ತಕ ಸಂಘ)
6. ನಿರ್ದೇಶಕರು(ಪರೀಕ್ಷೆ), ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ
7. ನಿರ್ದೇಶಕರು (ಇತರೆ ಪರೀಕ್ಷೆಗಳು), ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ

ಇದಲ್ಲದೆ ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮದ ಜವಾಬ್ದಾರಿಯನ್ನು ರಾಜ್ಯ ಯೋಜನಾ ನಿರ್ದೇಶಕರು ನೋಡಿಕೊಳ್ಳುತ್ತಾರೆ. ಇವರ ನೇರ ಅಧೀನದಲ್ಲಿ ನಿರ್ದೇಶಕರ ಹಂತದ ಒಬ್ಬ ಅಧಿಕಾರಿ ಮತ್ತು ಸಹ ನಿರ್ದೇಶಕರ ಹಂತದ 3 ಅಧಿಕಾರಿಗಳು ಕಾರ್ಯ ನಿರ್ವಹಿಸುತ್ತಿದ್ದಾರೆ.

ಜಿಲ್ಲಾ ಮಟ್ಟದಲ್ಲಿ 34 ಜಿಲ್ಲಾ ಉಪ ನಿರ್ದೇಶಕರು, ಬ್ಲಾಕ್ ಮಟ್ಟದಲ್ಲಿ 204 ಕ್ಷೇತ್ರ ಶಿಕ್ಷಣಾಧಿಕಾರಿಗಳು ಕಾರ್ಯ ನಿರ್ವಹಿಸುತ್ತಿದ್ದಾರೆ.

2011–12ನೇ ಸಾಲಿನಲ್ಲಿ ಶಿಕ್ಷಣದ ವಿವಿಧ ಕ್ಷೇತ್ರಗಳಿಗೆ ಒದಗಿಸಿದ ಪರಿಷ್ಕೃತ ಆಯವ್ಯಯದ ಪಕ್ಷಿನೋಟ

(ರೂ. ಲಕ್ಷಗಳಲ್ಲಿ)

| ಕ್ರ. ಸಂ. | ಕ್ಷೇತ್ರ | ಯೋಜನೆ | ಯೋಜನೇತರ | ಒಟ್ಟು | ಶೇಕಡವಾರು ಹಂಚಿಕೆ |
|---|---|---|---|---|---|
| 1 | ಪ್ರಾಥಮಿಕ ಶಿಕ್ಷಣ | 119493.16 | 472559.28 | 592052.44 | 52.16 |
| 2 | ಪ್ರೌಢ ಶಿಕ್ಷಣ | 76259.47 | 283445.20 | 359704.67 | 31.69 |
| 3 | ವಿಶ್ವವಿದ್ಯಾಲಯ ಮತ್ತು ಇತರೆ ಉನ್ನತ ಶಿಕ್ಷಣ | 30263.00 | 113719.40 | 143982.40 | 12.69 |
| 4 | ವಯಸ್ಕರ ಶಿಕ್ಷಣ | 840.00 | 304.82 | 1144.82 | 0.11 |
| 5 | ಭಾಷಾಭಿವೃದ್ಧಿ | 1470.00 | 1588.12 | 3058.120 | 0.27 |
| 6 | ಇತರೆ ಸಾಮಾನ್ಯ | 34818.90 | 211.97 | 35030.87 | 3.08 |
| | **ಒಟ್ಟು (ರೂ ಲಕ್ಷಗಳಲ್ಲಿ)** | **263144.53** | **871828.79** | **1134973.30** | **100** |

**ಪ್ರಾಥಮಿಕ ಶಿಕ್ಷಣ ನಿರ್ದೇಶನಾಲಯ :–**

- 6–14 ವಯೋಮಾನದ ಎಲ್ಲಾ ಮಕ್ಕಳು ಶಾಲೆಯಲ್ಲಿರುವಂತೆ ಮಾಡುವುದು.
- ಪ್ರತಿ ಮಗುವು ನಿಗಧಿಪಡಿಸಿದ ಕನಿಷ್ಠ ಕಲಿಕಾ ಹಂತವನ್ನು ಸಮರ್ಪಕವಾಗಿ ಕಲಿಯುವಂತೆ ನೋಡಿಕೊಳ್ಳುವುದು.
- ಪ್ರತಿ ಶಿಕ್ಷಕರು ಶಾಲೆಯಲ್ಲಿರುವಂತೆ ನೋಡಿಕೊಳ್ಳುವುದು.
- ಪ್ರಾಥಮಿಕ ಶಿಕ್ಷಣವು ಜನಾಂದೋಲನವಾಗುವಂತೆ, ಸಮುದಾಯವನ್ನು ಸಕ್ರಿಯವಾಗಿ ತೊಡಗಿಸುವುದು.
- ಚಿಣ್ಣರ ಅಂಗಳ, ವಸತಿಯುತ, ವಸತಿರಹಿತ ಶಾಲೆಗಳು, ಸಂಚಾರಿ ಶಾಲೆ, ಇತ್ಯಾದಿ ಕಾರ್ಯಕ್ರಮಗಳಿಂದ ಶಾಲೆಯಿಂದ ಹೊರಗುಳಿದ 6–14 ಶಾಲಾ ವಯೋಮಾನದ ಮಕ್ಕಳನ್ನು ಶಾಲಾ ಮುಖ್ಯವಾಹಿನಿಗೆ ತರುವುದು.
- ಗುಣಾತ್ಮಕ ಪ್ರಾಥಮಿಕ ಶಿಕ್ಷಣ ಒದಗಿಸುವುದು.

**ಮುಂದಿನ ಮೂರು ವರ್ಷಗಳ ಗುರಿ:**

- ಹಾಲಿ ಇರುವ ರಾಜ್ಯದ ಸಾಕ್ಷರತಾ ಪ್ರಮಾಣವನ್ನು 66.64 ರಿಂದ ಶೇಕಡ 80 ಕ್ಕೆ ಹೆಚ್ಚಿಸುವುದು.
- ಪ್ರಾಥಮಿಕ ಹಂತದಲ್ಲಿ ಶಾಲೆ ಬಿಡುವ ಮಕ್ಕಳ ಪ್ರಮಾಣವನ್ನು ಕಡಿಮೆಗೊಳಿಸುವುದು.
- 6 ರಿಂದ 14 ವಯೋಮಿತಿಯ ಎಲ್ಲಾ ಮಕ್ಕಳು (ಶಾಲೆಗೆ ಸೇರದ ಮತ್ತು ಮಧ್ಯದಲ್ಲಿ ಶಾಲೆ ಬಿಟ್ಟ ಮಕ್ಕಳು ಸೇರಿದಂತೆ) ಶಾಲೆಗಳಲ್ಲಿ ದಾಖಲಾಗಿ ಕನಿಷ್ಠ 8 ವರ್ಷಗಳ ಶಿಕ್ಷಣವನ್ನು ಪೂರ್ಣಗೊಳಿಸಿ ನಿಗಧಿತ ಕಲಿಕಾ ಸಾಮರ್ಥ್ಯಗಳನ್ನು ಹೊಂದುವಂತೆ ಮಾಡುವುದು.
- ಶಿಕ್ಷಕರ ಬೋಧನೆ ಪರಿಣಾಮಕಾರಿ ಹಾಗೂ ಫಲಪ್ರದವಾಗಲು ಅವರ ಬೋಧನಾ ಸಾಮರ್ಥ್ಯಗಳನ್ನು ಹೆಚ್ಚಿಸುವುದು.
- ಗುಣಾತ್ಮಕ ಬದಲಾವಣೆಗಳನ್ನು ತರುವುದರ ಮೂಲಕ ಶೈಕ್ಷಣಿಕ ಕ್ಷೇತ್ರದಲ್ಲಿ ಸುಧಾರಣೆಯನ್ನು ತರುವುದು.
- ಶಿಕ್ಷಣ ಕ್ಷೇತ್ರದಲ್ಲಿ ಸಮುದಾಯದ ಸಹಭಾಗಿತ್ವವನ್ನು ಖಚಿತಪಡಿಸಿಕೊಂಡು ಶಿಕ್ಷಣವನ್ನು ಜನಾಂದೋಲನವನ್ನಾಗಿಸುವುದು.
- ಶೈಕ್ಷಣಿಕ ಆಂದೋಲನಗಳ ಮೂಲಕ ಶಾಲಾಶಿಕ್ಷಣದಿಂದ ವಂಚಿತರಾದ 6 ರಿಂದ 14 ವಯೋಮಾನದ ಮಕ್ಕಳನ್ನು ವಿಶೇಷ ಸೇತುಬಂಧ ಕಾರ್ಯಕ್ರಮದ ಮೂಲಕ ಶಾಲಾ ಮುಖ್ಯವಾಹಿನಿಗೆ ಸೇರಿಸುವುದು.

ಇದುವರೆಗೂ ರಾಜ್ಯದಲ್ಲಿ ಪ್ರಾಥಮಿಕ ಶಿಕ್ಷಣ 7ನೇ ತರಗತಿಯವರೆಗಿನ ಶಿಕ್ಷಣವು ಪ್ರಾಥಮಿಕ ಶಿಕ್ಷಣ ನಿರ್ದೇಶಕರ ವ್ಯಾಪ್ತಿಯಲ್ಲಿತ್ತು ಈಗ 8ನೇ ತರಗತಿ ಶಿಕ್ಷಣವೂ ಇವರ ವ್ಯಾಪ್ತಿಗೆ ಒಳಪಡುತ್ತದೆ.

2003–04ನೇ ಸಾಲಿನಿಂದ 8ನೇ ತರಗತಿಯ ಶಿಕ್ಷಣವು ಹಿರಿಯ ಪ್ರಾಥಮಿಕ ಶಿಕ್ಷಣ ಹಂತಕ್ಕೆ ಸೇರ್ಪಡೆಯಾದ್ದರಿಂದ, ಒಟ್ಟಾರೆ ಪ್ರಾಥಮಿಕ ಶಿಕ್ಷಣವು 8 ವರ್ಷಗಳ ಅವಧಿಯನ್ನೊಳಗೊಂಡಿದೆ.

2011–12ನೇ ಸಾಲಿನಲ್ಲಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳ ಶಿಕ್ಷಕರ ಹಾಗೂ ವಿದ್ಯಾರ್ಥಿಗಳ ಅಂಕಿ ಅಂಶಗಳು ಈ ಕೆಳಕಂಡಂತೆ ಇರುತ್ತದೆ.

**ಶಾಲೆಗಳು:**

| ಕ್ರ. ಸಂ | ಶಾಲೆಗಳು | ಸರ್ಕಾರಿ | ಅನುದಾನ ಸಹಿತ | ಅನುದಾನ ರಹಿತ | ಇತರೆ | ಒಟ್ಟು |
|---|---|---|---|---|---|---|
| 1 | ಕಿರಿಯ ಪ್ರಾಥಮಿಕ ಶಾಲೆಗಳು | 22598 | 228 | 2951 | 2 | 25779 |
| 2 | ಹಿರಿಯ ಪ್ರಾಥಮಿಕ ಶಾಲೆಗಳು | 22601 | 2399 | 8005 | 22 | 33027 |
| 3 | ಪ್ರೌಢ ಶಾಲೆಗಳು | 4437 | 3335 | 5523 | 12 | 13307 |
| ಒಟ್ಟು | | 49636 | 5962 | 16479 | 36 | 72113 |

**ಶಿಕ್ಷಕರು :**

| ಕ್ರ. ಸಂ | ಶಾಲೆಗಳು | ಸರ್ಕಾರಿ | | ಅನುದಾನ ಸಹಿತ | | ಅನುದಾನ ರಹಿತ | | ಒಟ್ಟು | |
|---|---|---|---|---|---|---|---|---|---|
| | | ಮಂಜೂರು | ಕಾ.. ನಿ | ಮಂಜೂರು | ಕಾ.. ನಿ | ಮಂಜೂರು | ಕಾ.. ನಿ | ಮಂಜೂರು | ಕಾ.. ನಿ |
| 1 | ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳು | 201109 | 189451 | 20386 | 17229 | 82787 | 74103 | 304282 | 280783 |
| 2 | ಪ್ರೌಢ ಶಾಲೆ | 36905 | 34767 | 28352 | 26771 | 56570 | 43837 | 121827 | 105375 |
| | ಒಟ್ಟು | 238014 | 224218 | 48738 | 44000 | 139357 | 117940 | 426109 | 386158 |

**ವಿದ್ಯಾರ್ಥಿಗಳು: 2011–12**

| ಕ್ರ ಸಂ | ತರಗತಿ | ಸರ್ಕಾರಿ | ಅನುದಾನಿತ | ಅನುದಾನ ರಹಿತ | ಇತರೆ | ಒಟ್ಟು |
|---|---|---|---|---|---|---|
| 1 | 1 ರಿಂದ 5ನೇ ತರಗತಿಯವರೆಗೆ | 3041392 | 462683 | 1850052 | 4783 | 5358910 |
| 2 | 6 ರಿಂದ 8ನೇ ತರಗತಿಯವರೆಗೆ | 1639489 | 421574 | 823259 | 1567 | 2885889 |
| | ಒಟ್ಟು | 4680881 | 884257 | 2673311 | 6350 | 8244799 |

**ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣವನ್ನು ಪ್ರೋತ್ಸಾಹಿಸುವ ಕಾರ್ಯಕ್ರಮಗಳು;**

ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ ಗುರಿ ಸಾಧಿಸಲು 2011–12ನೇ ಸಾಲಿನಲ್ಲಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ರೂ.1430.00ಲಕ್ಷಗಳ ಅನುದಾನ ರಾಜ್ಯವಲಯ ಯೋಜನೆಯಡಿ ಒದಗಿಸಲಾಗಿದೆ. ಈ ಕೆಳಕಂಡ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

- 2011–12ನೇ ಸಾಲಿಗೆ ರಾಜ್ಯವಲಯ ಯೋಜನೆಯಡಿ ಮಧ್ಯಾಹ್ನ ಉಪಹಾರ ಯೋಜನೆ ಕೇಂದ್ರ ಕಾರ್ಯಾಲಯ ವೆಚ್ಚಗಳಿಗಾಗಿ ರೂ.57.92 ಲಕ್ಷ

- ಉರ್ದು ಮತ್ತು ಇತರೆ ಅಲ್ಪ ಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯದ ಶೈಕ್ಷಣಿಕ ಚಟುವಟಿಕೆಗಳಿಗಾಗಿ ರೂ.40.00 ಲಕ್ಷಗಳು.

- ಇ.ಎಂ.ಐ.ಎಸ್. ಅಭಿವೃದ್ಧಿಗಾಗಿ ರೂ.80.00 ಲಕ್ಷಗಳು

- ಪ್ರತಿಭಾ ಕಾರಂಜಿ ಕಾರ್ಯಕ್ರಮಗಳಿಗಾಗಿ ಹಾಗೂ ತಾಲ್ಲೂಕು ಜಿಲ್ಲಾ ಮಟ್ಟಗಳು, ರಾಜ್ಯ ಮತ್ತು ರಾಷ್ಟ್ರೀಯ ಹಂತಗಳ ಕ್ರೀಡಾಕೂಟಗಳನ್ನು ಏರ್ಪಡಿಸಲು ಮತ್ತು ಕ್ರೀಡಾ ಸಾಮಗ್ರಿಗಳನ್ನು ಕೊಳ್ಳಲು ರೂ.250.00ಲಕ್ಷಗಳನ್ನು ಒದಗಿಸಲಾಗಿದೆ.

- ಸರ್ಕಾರಿ ಉಪಾಧ್ಯಾಯರ ತರಬೇತಿ ಸಂಸ್ಥೆಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಹಾಗೂ ಕಟ್ಟಡ ನಿರ್ಮಾಣಕ್ಕಾಗಿ 145.00ಲಕ್ಷಗಳನ್ನು ಒದಗಿಸಲಾಗಿದೆ.

- ಇ–ಆಡಳಿತ ಕಾರ್ಯಕ್ರಮದಡಿ ಕಂಪ್ಯೂಟರ್ ಹಾರ್ಡ್ ವೇರ್ ಮತ್ತು ಸಾಫ್ಟ್ ವೇರ್‌ಗಳ ಖರೀದಿಗಾಗಿ ರೂ.409.28 ಲಕ್ಷ ಒದಗಿಸಲಾಗಿದೆ.

**<u>ಜಿಲ್ಲಾ ವಲಯದಡಿ 2011–12ನೇ ಸಾಲಿನಿಂದ ರೂ. 101235.54 ಲಕ್ಷಗಳ ಆಯವ್ಯಯದಲ್ಲಿ ಹೊಸ ಘಟಕಗಳಾದ ಈ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗಿದೆ :–</u>**

1. **<u>ಅಕ್ಷರ ದಾಸೋಹ</u>** : ಸರ್ಕಾರಿ ಹಾಗೂ ಅನುದಾನಿತ ಪ್ರಾಥಮಿಕ ಶಾಲೆಗಳಲ್ಲಿ ತರಗತಿ 1 ರಿಂದ 10 ರವರೆಗೆ ವ್ಯಾಸಂಗ ಮಾಡುತ್ತಿರುವ ಎಲ್ಲಾ ಮಕ್ಕಳಿಗೆ ಬಿಸಿಯೂಟ ನೀಡುವ ಅಕ್ಷರ ದಾಸೋಹ ಕಾರ್ಯಕ್ರಮದ ಮುಂದುವರಿಕೆಗಾಗಿ, 2011–12ನೇ ಸಾಲಿಗೆ ರೂ.71369.28 ಲಕ್ಷಗಳು ಬಿಡುಗಡೆಯಾಗಿದೆ.

2. ಹೊಸದಾಗಿ ಸೃಜನೆಯಾದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗಳಿಗೆ ಬಾಡಿಗೆ ವಾಹನ ವ್ಯವಸ್ಥೆ ಕಲ್ಪಿಸಲು ರೂ.17.28 ಲಕ್ಷ ಹಾಗೂ ಉಪನಿರ್ದೇಶಕರ ಕಛೇರಿಗಳಿಗೆ ಬಾಡಿಗೆ ವಾಹನ ಕಲ್ಪಿಸಲು ರೂ.5.40 ಲಕ್ಷಗಳನ್ನು ಬಿಡುಗಡೆ ಮಾಡಿದೆ.

3. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಎಲ್ಲಾ ಸಾಮಾನ್ಯ ಹೆಣ್ಣು ಮಕ್ಕಳ ಹಾಗೂ ಪರಿಶಿಷ್ಟ ಜಾತಿ/ಪಂಗಡದ ಹೆಣ್ಣು ಮತ್ತು ಗಂಡು ಮಕ್ಕಳ ಸರ್ಕಾರೇತರ ಶುಲ್ಕ ಮರುಪಾವತಿಗಾಗಿ ರೂ.1150.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

**<u>ಶಾಲೆ ಬಿಡುವ ಪ್ರಮಾಣ : (ಆಡಿಂಠಿ–ಂಣಣ)</u>**

(ಶೇಕಡಾವಾರು)

| ಕ್ರ. ಸಂ. | ತರಗತಿ | 2007–08 | 2008–09 | 2009–10 | 2010–11 | 2011–12 |
|---|---|---|---|---|---|---|
| 1 | 1 ರಿಂದ 5ನೇ ತರಗತಿಯವರೆಗೆ | 6.25% | 6.29% | 4.60% | 2.09 | 1.19 |
| 2 | 1 ರಿಂದ 7ನೇ ತರಗತಿಯವರೆಗೆ | 13.99% | 11.28% | 8.10% | 5.47 | 4.35 |
| 3 | 1 ರಿಂದ10ನೇ ತರಗತಿಯವರೆಗೆ | 16.24% | 14.79% | – | – | – |

ಮಾಹಿತಿ ಮೂಲ:ಇ.ಎಂ.ಐ.ಎಸ್.

**ಕಡ್ಡಾಯ ಪ್ರಾಥಮಿಕ ಶಿಕ್ಷಣ: 2011–12**

6 ರಿಂದ 14 ವಯೋಮಾನದೊಳಗಿನ ರಾಜ್ಯದ ಎಲ್ಲಾ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ನೀಡಲು ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.

1. **ದಾಖಲಾತಿ ಆಂದೋಲನ :**

ಶಾಲೆ ಬಿಟ್ಟ ಹಾಗೂ ಶಾಲೆಗೆ ಸೇರಬೇಕಾದ ಮಕ್ಕಳನ್ನು ಗುರ್ತಿಸಿ ಆ ವಿದ್ಯಾರ್ಥಿಗಳ ತಂದೆ ತಾಯಿ, ಪೋಷಕರನ್ನು ಸಂಪರ್ಕಿಸಿ, ಅವರ ಮಕ್ಕಳನ್ನು ಶಾಲೆಗೆ ನಿಯಮಿತವಾಗಿ ಕಳುಹಿಸುವಂತೆ ಮನವೊಲಿಸುವುದೇ ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿರುತ್ತದೆ.

2011–12ನೇ ಸಾಲಿನಲ್ಲಿ ದಾಖಲಾತಿ ಆಂಧೋಲನ ಕಾರ್ಯಕ್ರಮಗಳಿಂದ 0.93 ಲಕ್ಷ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಾಲಾ ಮುಖ್ಯ ವಾಹಿನಿಗೆ ತರಲಾಗಿದೆ. ಚಿಣ್ಣರ ಅಂಗಳ, ವಸತಿ ರಹಿತ, ವಸತಿ ಸಹಿತ, ಅಲ್ಪ ಕಾಲಾವಧಿ, ಧೀರ್ಘ ಕಾಲಾವಧಿ ಶಾಲೆಗಳು, ಸಂಚಾರಿ ಶಾಲೆಗಳು, ಶಾಲೆ ದೂರ ಇರುವ ಮಕ್ಕಳಿಗೆ ಸಂಚಾರಿ ವ್ಯವಸ್ಥೆ, ಸಮುದಾಯದತ್ತ ಶಾಲಾ ಕಾರ್ಯಕ್ರಮ ಇತ್ಯಾದಿ ಕಾರ್ಯಕ್ರಮಗಳ ಮೂಲಕ ಶಾಲೆ ಬಿಟ್ಟ ಮಕ್ಕಳನ್ನು ಶಾಲಾ ಮುಖ್ಯ ವಾಹಿನಿಗೆ ತರಲಾಗುತ್ತಿದೆ.

2. **ಹೆಣ್ಣು ಮಕ್ಕಳಿಗೆ ಉಚಿತ ಶಿಕ್ಷಣ :**

2002–03ನೇ ಸಾಲಿನಿಂದ 1 ರಿಂದ 10ನೇ ತರಗತಿಯವರೆಗೆ ಸರ್ಕಾರಿ ಪ್ರಾಥಮಿಕ/ಪ್ರೌಢಶಾಲೆಗಳಲ್ಲಿ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಎಲ್ಲಾ ಹೆಣ್ಣು ಮಕ್ಕಳಿಗೆ ಉಚಿತ ಶಿಕ್ಷಣ ನೀಡುವ ಮಹತ್ವದ ಕಾರ್ಯಕ್ರಮವನ್ನು ಜಾರಿಗೊಳಿಸಲಾಗಿದೆ.

ಹೆಣ್ಣು ಮಕ್ಕಳಿಗೆ ಸರ್ಕಾರದಿಂದ ನಿಗಧಿಪಡಿಸಿರುವ ಎಲ್ಲಾ ಶುಲ್ಕಗಳನ್ನು ವಿನಾಯ್ತಿ ನೀಡಿರುವುದಲ್ಲದೆ 8ನೇ ತರಗತಿಯ ಹೆಣ್ಣು ಹಾಗೂ ಗಂಡು ಮಕ್ಕಳಿಗೆ ಉಚಿತ ಬೈಸಿಕಲ್ ನೀಡಲಾಗುತ್ತಿದೆ. ಇದರಿಂದ ಹೆಣ್ಣು ಮಕ್ಕಳ ದಾಖಲಾತಿಯನ್ನು ಉತ್ತಮಪಡಿಸಲು ಹಾಗೂ ಶಾಲೆಯನ್ನು ಮಧ್ಯದಲ್ಲಿಯೇ ಬಿಡುವ ಮಕ್ಕಳನ್ನು ಪುನ: ಶಾಲೆಗೆ ಕರೆತರಲು ಸಹಕಾರಿಯಾಗಿದೆ.

3. **ಉಚಿತ ಸಮವಸ್ತ್ರ ವಿತರಣೆ:**

**2011–12**ನೇ ಸಾಲಿನ ರಾಜ್ಯ ಸರ್ಕಾರದ ಮುಂದುವರೆದ ಯೋಜನಾ ಕಾರ್ಯಕ್ರಮದ ವಿದ್ಯಾವಿಕಾಸ ಯೋಜನೆಯಡಿಯಲ್ಲಿ ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಎಲ್ಲಾ ವಿದ್ಯಾರ್ಥಿಗಳಿಗೆ ಒಂದು ಜೊತೆ ಸಮವಸ್ತ್ರಗಳನ್ನು ಉಚಿತವಾಗಿ ವಿತರಿಸುವ ಕಾರ್ಯಕ್ರಮ ಅನುಷ್ಠಾನಗೊಳಿಸಲಾಗಿದೆ. 1 ರಿಂದ 10ನೇ ತರಗತಿಯ ಎಲ್ಲಾ ಗಂಡು ಹಾಗೂ ಹೆಣ್ಣು ಮಕ್ಕಳಿಗೆ ಉಚಿತ ಸಮವಸ್ತ್ರ ವಿತರಿಸಲಾಗುತ್ತಿದೆ. ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿಯೇ ಉಚಿತ ಸಮವಸ್ತ್ರಗಳನ್ನು ಸರಬರಾಜು ಮಾಡಲಾಗಿದೆ.

**2009–10** ನೇ ಸಾಲಿಗೆ ಪ್ರೌಢಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ **1 ರಿಂದ 10ನೇ ತರಗತಿಯ 62.63 ಲಕ್ಷ** ವಿದ್ಯಾರ್ಥಿಗಳು ಈ ಯೋಜನೆಯ ಫಲಾನುಭವಿಗಳಾಗಿರುತ್ತಾರೆ. ಈ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ರೂ. **5500.00** ಲಕ್ಷಗಳನ್ನು ವಿನಿಯೋಗಿಸಲಾಗಿದೆ.

**4. ಉಚಿತ ಶಾಲಾಬ್ಯಾಗ್ ವಿತರಣಾ ಕಾರ್ಯಕ್ರಮ.**

**2011–12** ನೇ ಸಾಲಿನಲ್ಲಿ 1ರಿಂದ 5ನೇ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ವರ್ಗದ ಶಾಲಾ ಮಕ್ಕಳಿಗೆ ಶಾಲಾಬ್ಯಾಗ್‌ಗಳನ್ನು ವಿತರಿಸಲಾಗಿದೆ. ಹಾಗೂ 1 ರಿಂದ 10ನೇ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದ ಶಾಲಾ ಮಕ್ಕಳಿಗೆ ನೋಟ್ ಪುಸ್ತಕಗಳನ್ನು ವಿತರಿಸಲಾಗಿದೆ. ಈ ಯೋಜನಾ ಕಾರ್ಯಕ್ರಮಕ್ಕೆ ರಾಜ್ಯ ಸರ್ಕಾರವು ರೂ. 1300.**00** ಲಕ್ಷ ಅನುದಾನವನ್ನು ಒದಗಿಸಿದೆ. ಈ ಕಾರ್ಯಕ್ರಮದಡಿಯಲ್ಲಿ 12.15 ಲಕ್ಷ ಮಕ್ಕಳು ಶಾಲಾ ಬ್ಯಾಗ್ ಫಲಾನುಭವಿಗಳು . ಈ ಕಾರ್ಯಕ್ರಮವನ್ನು ರಾಜ್ಯ ಸರ್ಕಾರಿ ಶಾಲಾ ಎಸ್.ಡಿ.ಎಂ.ಸಿ.ಯವರ ಮೂಲಕ ಅನುಷ್ಠಾನಗೊಳಿಸಲಾಗಿದೆ.

## ಅಕ್ಷರ ದಾಸೋಹ ಕಾರ್ಯಕ್ರಮದ ಸಂಕ್ಷಿಪ್ತ ವಿವರ

## ಅಕ್ಷರ ದಾಸೋಹ ನಡೆದು ಬಂದ ದಾರಿ

2002–03ರವರೆವಿಗೆ ರಾಜ್ಯದ ಎಲ್ಲಾ ಸರ್ಕಾರಿ ಪ್ರಾಥಮಿಕ ಮತ್ತು ಅನುದಾನಿತ ಶಾಲೆಗಳ ವಿದ್ಯಾರ್ಥಿಗಳಿಗೆ ಒಂದು ತಿಂಗಳಿಗೆ ತಲಾ 3 ಕೆ.ಜಿ. ಅಕ್ಕಿಯನ್ನು ಪ್ರತಿ ತಿಂಗಳು ನೀಡಲಾಗುತ್ತಿತ್ತು. ಕರ್ನಾಟಕ ರಾಜ್ಯದಲ್ಲಿ ಅಕ್ಷರ ದಾಸೋಹ ಕಾರ್ಯಕ್ರಮ 2002–03ನೇ ಸಾಲಿನಲ್ಲಿ ಮೊದಲ ಹಂತದಲ್ಲಿ ಶೈಕ್ಷಣಿಕ ಹಾಗೂ ಆರ್ಥಿಕವಾಗಿ ಅತ್ಯಂತ ಹಿಂದುಳಿದ ಈಶಾನ್ಯ ವಲಯದ ಏಳು ಜಿಲ್ಲೆಗಳಲ್ಲಿ ಸರ್ಕಾರಿ ಶಾಲೆಗಳ 1 ರಿಂದ 5ನೇ ತರಗತಿಗಳ ವಿದ್ಯಾರ್ಥಿಗಳಿಗೆ ಬಿಸಿಊಟ ಪ್ರಾರಂಭಿಸಲಾಯಿತು. 2003–04 ನೇ ಸಾಲಿನಿಂದ ಉಳಿದ 20 ಜಿಲ್ಲೆಗಳಿಗೂ ದಿನಾಂಕ:01.09.2004ರಿಂದ ಅನುದಾನಿತ ಪ್ರಾಥಮಿಕ ಶಾಲೆಗಳಿಗೂ ದಿನಾಂಕ:01.01.2004ರಿಂದ ರಾಜ್ಯದ ಸರ್ಕಾರಿ ಮತ್ತು ಅನುದಾನಿತ ಪ್ರಾಥಮಿಕ ಶಾಲೆಗಳ 6 ಮತ್ತು 7ನೇ ತರಗತಿ ವಿದ್ಯಾರ್ಥಿಗಳಿಗೂ ವಿಸ್ತರಿಸಿದೆ. 2007–08ನೇ ಸಾಲಿನಿಂದ ಯೋಜನೆಯನ್ನು ಸರ್ಕಾರಿ ಮತ್ತು ಅನುದಾನಿತ ಪ್ರೌಢಶಾಲೆಗಳಿಗೂ ವಿಸ್ತರಿಸಲಾಯಿತು.

**2011–12ನೇ ಸಾಲಿನಲ್ಲಿ ಪ್ರಯೋಜನ ಪಡೆಯುತ್ತಿರುವ ಶಾಲೆಗಳ ಸಂಖ್ಯೆ**

| ಶಾಲೆಗಳು | ಸರ್ಕಾರಿ | ಅನುದಾನಿತ | ಒಟ್ಟು |
|---|---|---|---|
| **ಪ್ರಾಥಮಿಕ** | 45476 | 2449 | 47925 |
| **ಪ್ರೌಢ** | 4063 | 2805 | 6868 |

**2011–12ನೇ ಸಾಲಿನಲ್ಲಿ ಪ್ರಯೋಜನ ಪಡೆಯುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ(ಲಕ್ಷಗಳಲ್ಲಿ)**

| ತರಗತಿ | ದಾಖಲಾತಿ | ಹಾಜರಾತಿ | ಫಲಾನುಭವಿಗಳು |
|---|---|---|---|
| 1 ರಿಂದ 5 | 39.21 | 36.90 | 35.01 |
| 6 ರಿಂದ 8 | 22.51 | 21.32 | 20.00 |
| 9 ರಿಂದ 10 | 12.78 | 12.22 | 11.14 |
| **ಒಟ್ಟು** | **74.50** | **70.45** | **66.15** |

**ಪ್ರಾಥಮಿಕ ಮತ್ತು ಪ್ರೌಢ ಶಾಲಾ ವಿದ್ಯಾರ್ಥಿಗಳಿಗೆ ನೀಡುತ್ತಿರುವ ಆಹಾರ ಧಾನ್ಯ ಮತ್ತು ಪರಿವರ್ತನಾ ವೆಚ್ಚದ ವಿವರ**
**(ಪ್ರತಿ ವಿದ್ಯಾರ್ಥಿಗೆ/ಪ್ರತಿ ದಿನಕ್ಕೆ)**

**(ರೂ.ಗಳಲ್ಲಿ)**

| <u>ಆಹಾರ ಪದಾರ್ಥ</u> | 1 ರಿಂದ 5 | | 6 ರಿಂದ 8 | | 9 ರಿಂದ 10 | |
|---|---|---|---|---|---|---|
| | ಪ್ರಮಾಣ (ಗ್ರಾಂಗಳಲ್ಲಿ) | ವೆಚ್ಚ | ಪ್ರಮಾಣ (ಗ್ರಾಂಗಳಲ್ಲಿ) | ವೆಚ್ಚ | ಪ್ರಮಾಣ (ಗ್ರಾಂಗಳಲ್ಲಿ) | ವೆಚ್ಚ |
| ಅಕ್ಕಿ | 100 | ಉಚಿತ # | 150 | ಉಚಿತ # | 150 * | 1.40 |
| ಬೇಳೆ | 20 | 1.22 | 30 | 1.83 | 30 | 1.83 |
| ಎಣ್ಣೆ | 05 | 0.27 | 7.5 | 0.41 | 7.5 | 0.41 |
| ಡಿ.ಎಫ್. ಉಪ್ಪು | 02 | 0.02 | 0.3 | 0.04 | 03 | 0.04 |
| ತರಕಾರಿ | *50* | 0.65 | *75* | 0.27 | *75* | 0.97 |
| ಸಾಗಾಣಿಕಾ ವೆಚ್ಚ | | 0.01 | | 0.01 | | 0.01 |
| ಇಂಧನ | | 0.52 | | 0.77 | | 0.77 |
| ಆಡಳಿತಾತ್ಮಕ ವೆಚ್ಚ | | 0.57 | | 0.37 | | 0.15 |

* ರಾಜ್ಯ ಸರ್ಕಾರವು ಎ.ಪಿ.ಎಲ್ ದರದಲ್ಲಿ ಅಕ್ಕಿಯನ್ನು ನೀಡುತ್ತಿದೆ.

# ಕೇಂದ್ರ ಸರ್ಕಾರವು ಉಚಿತವಾಗಿ ನೀಡುತ್ತಿದೆ.

**ಕೇಂದ್ರ ಮತ್ತು ರಾಜ್ಯ ಸರ್ಕಾರದ ಘಟಕ ವೆಚ್ಚದ ವಿವರ:–**

| ತರಗತಿ | ರಾಜ್ಯದ ಪಾಲು | ಕೇಂದ್ರದ ಪಾಲು | ಒಟ್ಟು | ಸಾಗಾಣಿಕಾ ವೆಚ್ಚ (ರೂ.ಗಳಲ್ಲಿ) | |
|---|---|---|---|---|---|
| | ರೂ.ಪೈ | ರೂ.ಪೈ | ರೂ.ಪೈ | ರಾಜ್ಯ | ಕೇಂದ್ರ |
| 1–5 | 0.67 | 2.02 | 2.69 | – | 75.00 |

| | | | | | |
|---|---|---|---|---|---|
| 6–8 | 1.01 | 3.02 | 4.03 | – | 75.00 |
| 9–10 | 5.43 | – | 5.43 | 75.00 | – |

ಕೇಂದ್ರ ಸರ್ಕಾರವು ದಿನಾಂಕ:01.12.09ರಿಂದ ಜಾರಿಗೆ ಬರುವಂತೆ ಅಡುಗೆ ತಯಾರಿಕಾ ವೆಚ್ಚವನ್ನು ಪ್ರತಿ ಮಗುವಿಗೆ/ದಿನಕ್ಕೆ ತರಗತಿ 1 ರಿಂದ 5ರವರೆಗೆ ರೂ.1.58 ರಿಂದ ರೂ.1.88ಕ್ಕೆ ಹಾಗೂ ತರಗತಿ 6 ರಿಂದ 8 ಕ್ಕೆ ರೂ.2.10 ರಿಂದ ರೂ.2.81ಕ್ಕೆ ಪರಿಷ್ಕರಿಸಿದೆ.

**ಸೂಚಿತ ಆಹಾರ ಪಟ್ಟಿ:-**

ವಿದ್ಯಾರ್ಥಿಗಳಿಗೆ ವಾರದಲ್ಲಿ ಈ ಕೆಳಕಂಡಂತೆ ಆಹಾರವನ್ನು ತಯಾರಿಸಿ ನೀಡಲು ಸೂಚಿಸಲಾಗಿದೆ

| ವಾರಗಳು | ನೀಡುತ್ತಿರುವ ಆಹಾರ |
|---|---|
| ಸೋಮವಾರ | ಬೇಳೆ ಮತ್ತು ತರಕಾರಿ ಬಳಸಿಕೊಂಡು ಅನ್ನ ಮತ್ತು ಸಾಂಬಾರು ನೀಡುವುದು. |
| ಮಂಗಳವಾರ | |
| ಬುಧವಾರ | |
| ಗುರುವಾರ | |
| ಶುಕ್ರವಾರ | ಬಿಸಿಬೇಳೆ ಬಾತ್ |
| ಶನಿವಾರ | ತರಕಾರಿ ಉಪ್ಪಿಟ್ಟು |

**ಪೌಷ್ಠಿಕಾಂಶದ ವಿವರ:-**

ಬಿಸಿಊಟ ನೀಡುವುದರಿಂದ ಪ್ರತಿ ಮಗುವಿಗೆ ದಿವಸಕ್ಕೆ ( ಪ್ರಾಥಮಿಕ ಶಾಲೆ ಮಕ್ಕಳು ) 490 ಕ್ಯಾಲರಿಯಷ್ಟು ಪೌಷ್ಠಿಕಾಂಶ ಹಾಗೂ 13.8 ಗ್ರಾಂ ಪ್ರೋಟೀನ್ ದೊರೆಯುತ್ತಿದೆ. ( ಪ್ರೌಢ ಶಾಲೆ ಮಕ್ಕಳು ) 728.35 ಕ್ಯಾಲರಿಯಷ್ಟು ಪೌಷ್ಠಿಕಾಂಶ ಹಾಗೂ 20.7 ಗ್ರಾಂ ಪ್ರೋಟೀನ್ ದೊರೆಯುತ್ತಿದೆ. ಈ ವಿಷಯವನ್ನು ಸಾರ್ವಜನಿಕರ ಗಮನಕ್ಕಾಗಿ ತರಲು ಶಾಲಾ ಗೋಡೆ ಅಥವಾ ಅಡುಗೆ ಕೋಣೆಯ ಗೋಡೆಗಳ ಮೇಲೆ ಬಿಸಿಊಟಕ್ಕೆ ವೆಚ್ಚವಾಗುವ ವಿವರಗಳು ಹಾಗೂ ಪ್ರತಿ ದಿನದ ವಿದ್ಯಾರ್ಥಿಗಳ ಅಂಕಿ ಅಂಶಗಳು, ಶುಚಿತ್ವ, ಸುರಕ್ಷತೆ, ಮಿತವ್ಯಯ, ಹೆಚ್ಚುವರಿ ಪೌಷ್ಠಿಕಾಂಶ ಮಾತ್ರೆಗಳ ಬಗ್ಗೆ ಮಾಹಿತಿಯನ್ನು ಬರೆಸಲಾಗಿದೆ.

**ಮಾತ್ರೆಗಳ ಸರಬರಾಜು ವಿವರ:-**

2011-12ನೇ ಸಾಲಿಗೆ 3 ತರಹದ ಪೌಷ್ಠಿಕಾಂಶ ಮಾತ್ರೆಗಳು ಎಲ್ಲಾ ಶಾಲೆಗಳಿಗೂ ಈಗಾಗಲೇ ಆರೋಗ್ಯ ಇಲಾಖೆಯ ಅಧೀನದಲ್ಲಿರುವ ಕರ್ನಾಟಕ ರಾಜ್ಯ ಡ್ರಗ್ಸ್ ಲಾಜಿಸ್ಟಿಕ್ & ವೇರ್ ಹೌಸಿಂಗ ಸೊಸೈಟಿ, ಬೆಂಗಳೂರು ರವರು ಸರಬರಾಜು ಮಾಡಿರುತ್ತಾರೆ.

**ಮಾತ್ರೆಗಳ ವಿವರ:-**

| ಮಾತ್ರೆಗಳು | | ಪ್ರಮಾಣ |
|---|---|---|
| ವಿಟಮಿನ್ ಎ | 2 ಲಕ್ಷ ಐ.ಯು | ವರ್ಷಕ್ಕೆ 2 ಮಾತ್ರೆಗಳು |
| ಕಬ್ಬಿಣಾಂಶ ಮಾತ್ರೆ | **20 ಎಂ.ಜಿ** | ವಾರಕ್ಕೆ 3 ರಂತೆ 36 ವಾರಗಳಿಗೆ- 108 ಮಾತ್ರೆಗಳು |
| ಆಲ್‌ಬೆಂಡಜೋಲ್ (ಜಂತು ನಿವಾರಕ ಮಾತ್ರೆಗಳು) | 400 ಎಂ.ಜಿ | ವರ್ಷಕ್ಕೆ 2 ಮಾತ್ರೆಗಳು |

ಮೇಲ್ಕಂಡ ಮಾತ್ರೆಗಳನ್ನು ಸರ್ಕಾರಿ ಮತ್ತು ಅನುದಾನಿತ ಶಾಲೆಗಳ 1 ರಿಂದ 7ನೇ ತರಗತಿ ಮಕ್ಕಳಿಗೆ ನೀಡಲಾಗುತ್ತಿದೆ.

***ಅಡುಗೆ ಕೇಂದ್ರಗಳ ವಿವರ:-***

ರಾಜ್ಯದಲ್ಲಿ ಒಟ್ಟು 48436 ಅಡುಗೆ ಕೇಂದ್ರಗಳಿದ್ದು, ಈ ಕೆಳಕಂಡಂತೆ ಅಡುಗೆ ಕೇಂದ್ರಗಳನ್ನು ವರ್ಗೀಕರಿಸಲಾಗಿದೆ.

| ಕೇಂದ್ರದ ಮಾದರಿ | ಮಕ್ಕಳ ಸಂಖ್ಯೆ | ಒಟ್ಟು ಕೇಂದ್ರಗಳು |
|---|---|---|
| ಎ1 | 0 - 25 | 4580 |
| ಎ | 26 - 70 | 12952 |
| ಬಿ | 71 - 300 | 18875 |

| | | |
|---|---|---|
| ಸಿ | 301 ಕ್ಕಿಂತ ಮೇಲ್ಪಟ್ಟು | 3864 |
| **ಒಟ್ಟು** | | 40271 |

**ಸ್ವಯಂ ಸೇವಾ ಸಂಸ್ಥೆಗಳು:-**

ಒಟ್ಟು 100 ಸ್ವಯಂ ಸೇವಾ ಸಂಸ್ಥೆಗಳು ಒಟ್ಟು 5618 ಶಾಲೆಗಳ 10.98 ಲಕ್ಷ ಮಕ್ಕಳಿಗೆ ಬಿಸಿಊಟ ನೀಡುತ್ತಿವೆ. ಅವುಗಳಲ್ಲಿ ಮುಖ್ಯವಾದವು ಈ ಕೆಳಕಂಡಂತಿವೆ.

| ಕ್ರ.ಸಂ. | ಸ್ವಯಂ ಸೇವಾ ಸಂಸ್ಥೆ ಹೆಸರು | ಶಾಲೆಗಳ ಸಂಖ್ಯೆ | ಮಕ್ಕಳ ಸಂಖ್ಯೆ |
|---|---|---|---|
| 1 | ಅಕ್ಷಯ ಪಾತ್ರ ಫೌಂಢೇಷನ್, ಬೆಂಗಳೂರು ಮತ್ತು ಹುಬ್ಬಳ್ಳಿ | 1911 | 367556 |
| 2 | ಅದಮ್ಯ ಚೇತನ, ಬೆಂಗಳೂರು ಮತ್ತು ಹುಬ್ಬಳ್ಳಿ | 396 | 84013 |
| 3 | ಮೊಹಿಷನ್ ಷರೀಪ್, ಬೆಂಗಳೂರು | 185 | 35495 |
| 4 | ಅಖಿಲ ಕರ್ನಾಟಕ ಕನ್ನಡ ಕಸ್ತೂರಿ ಕಲಾ ಸಂಘ, ಬೆಂಗಳೂರು | 224 | 33370 |

**ಅನುಷ್ಠಾನದ ಜವಾಬ್ದಾರಿ:**

**ಶಾಲಾ ಮಟ್ಟ:-**

ಶಾಲಾ ಹಂತದಲ್ಲಿ ಮುಖ್ಯ ಅಡುಗೆಯವರು ಹಾಗೂ ಎಸ್.ಡಿ.ಎಂ.ಸಿ ಅಧ್ಯಕ್ಷರು ಕಾರ್ಯಕ್ರಮದ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದಾರೆ. ಕೇಂದ್ರ ಸರ್ಕಾರದ ಸೂಚನೆಯಂತೆ ತಾಯಂದಿರ ಸಮಿತಿಯನ್ನು ಶಾಲೆಗಳಲ್ಲಿ ರಚಿಸಲಾಗಿದ್ದು, ಪ್ರತಿ ದಿನವೂ ಒಬ್ಬ ವಿದಾರ್ಥಿಯ ತಾಯಿ ಅಡುಗೆಯ ಮೇಲ್ವಿಚಾರಣೆ ಹಾಗೂ ಊಟದ ರುಚಿ ನೋಡಿ ಬಡಿಸುವುದರಲ್ಲಿ ಪಾಲ್ಗೊಳ್ಳುವುದರ ಮೂಲಕ ಮಕ್ಕಳು ತಮ್ಮ ಮನೆಯ ವಾತಾವರಣದಂತೆ ಭಾವಿಸಿಕೊಂಡು ಬಿಸಿಊಟ ಪಡೆಯಲು ಅವಕಾಶ ಕಲ್ಪಿಸಲಾಗಿದೆ. ಅಕ್ಷರ ದಾಸೋಹ ಕಾರ್ಯಕ್ರಮದಲ್ಲಿ ಶಿಕ್ಷಕರನ್ನು ತೊಡಗಿಸಿಕೊಂಡಿರುವುದಿಲ್ಲ. ಪ್ರತಿನಿತ್ಯವು ವಿದ್ಯಾರ್ಥಿಗಳಿಗೆ ಹಾಜರಾತಿ ಹಾಕಿ ಮುಖ್ಯ ಅಡುಗೆಯವರಿಗೆ, ಮಕ್ಕಳ ಆದಿನದ ಆಹಾರ ಬೇಡಿಕೆ ನೀಡುವ ಮಟ್ಟಿಗೆ ಹಾಗೂ ಮಕ್ಕಳ ಆರೋಗ್ಯ ನೈರ್ಮಲ್ಯದ ಕಡೆ ಗಮನ ಕೊಡಲು ಮಾತ್ರ ಸೀಮಿತಗೊಳಿಸಲಾಗಿದೆ.

**ತಾಲ್ಲೂಕು ಮಟ್ಟ:-**

ತಾಲ್ಲೂಕು ಮಟ್ಟದಲ್ಲಿ ಅಸಿಸ್ಟೆಂಟ್ ಕಮೀಷನರ್ ರವರ ನೇತೃತ್ವದಲ್ಲಿ ಉಸ್ತುವಾರಿ ಹಾಗೂ ಪರಾಮರ್ಶ ಸಮಿತಿ ಇದ್ದು, ಕಾರ್ಯಕ್ರಮದ ಅನುಷ್ಠಾನ ಹಾಗೂ ಮೇಲುಸ್ತುವಾರಿಯನ್ನು ನಿರ್ವಹಿಸುತ್ತಿದ್ದಾರೆ. ತಾಲ್ಲೂಕು ಕಾರ್ಯನಿರ್ವಹಣಾಧಿಕಾರಿಗಳ ಅಧೀನದಲ್ಲಿ ಅಕ್ಷರ ದಾಸೋಹ ಸಹಾಯಕ ನಿರ್ದೇಶಕರು ಕಾರ್ಯಕ್ರಮದ ಅನುಷ್ಠಾನದಲ್ಲಿ ನೆರವಾಗಲು ಕಾರ್ಯನಿರ್ವಹಿಸುತ್ತಿದ್ದಾರೆ.

**ಜಿಲ್ಲಾ ಮಟ್ಟ:-**

ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಅನುಷ್ಠಾನ ಸಮಿತಿ ಇದ್ದು, ಕಾರ್ಯಕ್ರಮದ ಅನುಷ್ಠಾನ ಮತ್ತು ಮೇಲ್ವಿಚಾರಣೆಯನ್ನು ಮಾಡುತ್ತಿದೆ. ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಅಧೀನದಲ್ಲಿ ಚಾಲನಾ ಮತ್ತು ಪರಾಮರ್ಶ ಸಮಿತಿ ಇದ್ದು, ಕಾರ್ಯಕ್ರಮದ ಅನುಷ್ಠಾನ ಹಾಗೂ ಮೇಲುಸ್ತುವಾರಿಯನ್ನು ನಿರ್ವಹಿಸುತ್ತಿದ್ದಾರೆ.

**ರಾಜ್ಯ ಮಟ್ಟ:-**

ರಾಜ್ಯ ಮಟ್ಟದಲ್ಲಿ ಚಾಲನಾ ಮತ್ತು ಪರಾಮರ್ಶ ಸಮಿತಿ, ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ರಚಿತವಾಗಿದ್ದು, ಸದರಿ ಸಭೆಯನ್ನು ವರ್ಷಕ್ಕೆ ಎರಡು ಬಾರಿ ನಡೆಸಲಾಗುತ್ತಿದೆ.

## ಪ್ರಸ್ತುತ ಸಾಲಿನಲ್ಲಿ ಕಾರ್ಯಕ್ರಮದ ಅನುಷ್ಠಾನ:-

| | ಪ್ರಸ್ತಾವನೆ ( ರೂ ) | ಮಂಜೂರಾತಿ ( ರೂ ) |
|---|---|---|
| ಕೇಂದ್ರದ ಪಾಲು | 46251.54 | 46251.54 |
| ರಾಜ್ಯದ ಪಾಲು | 16923.84 | 16923.84 |
| **ಕೇಂದ್ರ + ರಾಜ್ಯದ ಪಾಲು** | | **60158.25** |

2009-10ನೇ ಸಾಲಿನಲ್ಲಿ 226 ದಿನಗಳಿಗೆ ಊಟ ನೀಡಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು, 216 ದಿನಗಳಿಗೆ ಮಂಜೂರಾತಿ ನೀಡಿರುತ್ತಾರೆ. ಸೆಪ್ಟೆಂಬರ್-09 ರವರೆಗೆ 103 ದಿನಗಳಿಗೆ ಊಟವನ್ನು ಶಾಲೆಗಳಲ್ಲಿ ನೀಡಲಾಗಿದೆ. ದಿನಾಂಕ :10.04.10ರವರೆಗೆ 113 ದಿನಗಳಿಗೆ ಊಟವನ್ನು ನೀಡಲಾಗುವುದು.

### ಆಹಾರ ಧಾನ್ಯ ಎತ್ತುವಳಿ ಹಾಗೂ ಉಪಯೋಗದ ವಿವರ 31.12.09ರಲ್ಲಿದ್ದರಂತೆ

(ಮೆಟ್ರಿಕ್ ಟನ್‌ಗಳಲ್ಲಿ)

| ತರಗತಿ | ಹಂಚಿಕೆ (ಏಪ್ರಿಲ್ -09 ರಿಂದ ಮಾರ್ಚ್-10) | ಪ್ರಾರಂಭಿಕ ಶಿಲ್ಕು 1-4-2009 | ಎತ್ತುವಳಿ ಡಿಸೆಂಬರ್-09ರವರೆಗೆ | ಒಟ್ಟು | ಉಪಯೋಗ | ಶೇ. ಎತ್ತುವಳಿ | ಶೇ. ಉಪಯೋಗ |
|---|---|---|---|---|---|---|---|
| 1-5 | 71005.040 | 7317.36 | 48958.953 | 56276.313 | 51231.35 | 68.95 | 91.04 |
| 6-8 | 61200.538 | 5969.065 | 42054.651 | 48023.716 | 43215.63 | 68.72 | 89.98 |
| 9-10 | 25803.42 (ಡಿಸೆಂಬರ್-09ರವರೆಗೆ) | - | 25803.42 | 25803.42 | 23352.09 | 100.00 | 90.05 |

## ಅನಿಲ ಸರಬರಾಜು ವಿವರ:-

2009-10ನೇ ಸಾಲಿಗೆ ಎಲ್ಲಾ ಜಿಲ್ಲೆಗಳ ಪೈಕಿ 5 ಜಿಲ್ಲೆಗಳಲ್ಲಿ ಶೇ.70ಕ್ಕಿಂತ ಕಡಿಮೆ ಅನಿಲ ಸಿಲಿಂಡರ್ ಸರಬರಾಜು ಆಗಿರುತ್ತದೆ. ಇದರಿಂದ ಕಾರ್ಯಕ್ರಮದ ಮೂಲ ಉದ್ದೇಶಕ್ಕೆ ಧಕ್ಕೆ ಉಂಟಾಗುತ್ತಿದ್ದು, (ಜಿಲ್ಲಾವಾರು ಪಟ್ಟಿ ಲಗತ್ತಿಸಿದೆ).

## ಬೇಳೆ ಸರಬರಾಜು ವಿವರ:-

2009-10ನೇ ಸಾಲಿಗೆ ತೊಗರಿಬೇಳೆಯು ಮಾರುಕಟ್ಟೆಯಲ್ಲಿ ಅಗತ್ಯ ಪ್ರಮಾಣದಷ್ಟು ಮತ್ತು ಕಡಿಮೆ ಬೆಲೆಗೆ ದೊರೆಯದ ಕಾರಣ ಪ್ರಸ್ತುತ ಮಾರುಕಟ್ಟೆಯಲ್ಲಿ ಸಗಟು ಖರೀದಿ ಬೆಲೆಯು 1 ಕೆ.ಜಿ.ಗೆ ರೂ.100/-ಗಳಿಗಿಂತ ಹೆಚ್ಚಾಗಿದ್ದು, ಮೊದಲಿದ್ದ ದರದಲ್ಲಿ ಖರೀದಿ ಮಾಡಿ ಸರಬರಾಜು ಮಾಡಲು ಸಾಧ್ಯವಾಗುವುದಿಲ್ಲವೆಂದು, ಕರ್ನಾಟಕ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಬೆಂಗಳೂರು ರವರು ತಿಳಿಸಿದ್ದರ ಮೇರೆಗೆ ತೊಗರಿಬೇಳೆಗೆ ಬದಲಾಗಿ ಪರ್ಯಾಯವಾಗಿ ಹೆಸರುಕಾಳು, ಅಲಸಂದೆಕಾಳು, ಹುರುಳಿಕಾಳು ಮತ್ತು ಕಡ್ಲೆಕಾಳುಗಳು ಕಡಿಮೆ ಬೆಲೆಗೆ ದೊರೆಯುವುದರಿಂದ 2 ತಿಂಗಳಿಗೊಮ್ಮೆ ಬೇರೆ-ಬೇರೆ ಕಾಳುಗಳನ್ನು ಖರೀದಿಸಿ ಸರಬರಾಜು ಮಾಡುವುದನ್ನು ಪರಿಗಣಿಸಲು ಸರ್ಕಾರ ದಿನಾಂಕ:07.08.09ರಂದು ಆದೇಶಿಸಿದೆ. ಅದರಂತೆ ಕ್ರಮ ಕೈಗೊಳ್ಳಲಾಗಿದೆ.

## ಅಡುಗೆ ಕೋಣೆಗಳ ನಿರ್ಮಾಣ:-

| ವರ್ಷ | ಮಂಜೂರಾತಿ | ಪೂರ್ಣಗೊಂಡಿರುವುದು | ವಿವಿಧ ಹಂತ | ಪ್ರಾರಂಭ ಆಗಿಲ್ಲದಿರುವುದು | ಶೇಕಡವಾರು |
|---|---|---|---|---|---|

| | | | | | |
|---|---|---|---|---|---|
| 2005–06 | 6000 | 5925 | 75 | – | 98.75 |
| 2006–07 | 5200 | 5148 | 52 | | 99.00 |
| ಕೇಂದ್ರ ಸರ್ಕಾರ | | | | | |
| 2007–08 | 9606 | 8973 | 405 | 228 | 93.40 |
| 2009–10 | 18241 | 1675 | 887 | 15679 | 9.18 |

ಕೇಂದ್ರ ಸರ್ಕಾರವು 2007–08ನೇ ಸಾಲಿನಲ್ಲಿ 18241 ಅಡುಗೆ ಕೋಣೆಗಳನ್ನು ನಿರ್ಮಾಣ ಮಾಡಲು ಪ್ರತಿ ಅಡುಗೆ ಕೋಣೆಗೆ ರೂ.60,000/– ದಂತೆ ಒಟ್ಟು 10944.60ಲಕ್ಷಗಳನ್ನು ಬಿಡುಗಡೆ ಮಾಡಿರುತ್ತದೆ. ಈ ಅನುದಾನವು ರಾಜ್ಯ ಸರ್ಕಾರವು ಜುಲೈ–09ರ ಮಾಹೆಯಲ್ಲಿ ಜಿಲ್ಲೆಗಳಿಗೆ ಬಿಡುಗಡೆ ಮಾಡಿದೆ. ಈ ಅನುದಾನವು ಜಿಲ್ಲಾ ಹಂತಕ್ಕೆ ಬಿಡುಗಡೆಯಾಗಿದ್ದರೂ ಸಹ ಜಿಲ್ಲಾ ಪಂಚಾಯತ್ ಹಂತದಲ್ಲಿ ಲೆಕ್ಕ ಮರುಹೊಂದಾಣಿಕೆ ಆಗಿಲ್ಲದೆ ಇರುವುದರಿಂದ ಎಸ್.ಡಿ.ಎಂ.ಸಿ. ಖಾತೆಗಳಿಗೆ ಜಮಾ ಆಗಿರುವುದಿಲ್ಲ. ಎಸ್.ಡಿ.ಎಂ.ಸಿ. ಖಾತೆಗೆ ಜಮಾ ಮಾಡಲು ಒತ್ತಾಯಿಸಿದೆ. ಅನುದಾನ ಎಸ್.ಡಿ.ಎಂ.ಸಿ.ಗಳಿಗೆ ಬಿಡುಗಡೆಯಾದ ನಂತರ ಕಾಮಗಾರಿಯು ಮುಂದಿನ 6 ತಿಂಗಳಲ್ಲಿ ಪೂರ್ಣಗೊಳಿಸಲಾಗುವುದು.ಕೇಂದ್ರ ಸರ್ಕಾರವು ಮಾರ್ಗಸೂಚಿಯಲ್ಲಿ ಈ ಕೆಳಕಂಡ ವಿಸ್ತೀರ್ಣವುಳ್ಳ ನಕ್ಷೆ ನೀಡಿ ನಿರ್ಮಾಣ ಮಾಡಲು ತಿಳಿಸಿದೆ.

ಒಟ್ಟು ನಿರ್ಮಾಣದ ವಿಸ್ತೀರ್ಣ(ಗೋಡೆಗಳು ಸೇರಿ) = 24.76 ಚ.ಮೀ

ಒಟ್ಟು ದಾಸ್ತಾನು ಕೊಠಡಿ ನೆಲದ ವಿಸ್ತೀರ್ಣ = 2.92 ಚ.ಮೀ.

ಒಟ್ಟು ಶುಚಿ ಮಾಡುವ ಸ್ಥಳ ನೆಲದ ವಿಸ್ತೀರ್ಣ = 5.71 ಚ.ಮೀ.

ಒಟ್ಟು ಅಡುಗೆ ಮಾಡುವ ಸ್ಥಳದ ವಿಸ್ತೀರ್ಣ = 8.41 ಚ.ಮೀ.

ಒಟ್ಟು ಊಟ ಬಡಿಸುವ ಸ್ಥಳದ ವಿಸ್ತೀರ್ಣ = 3.44 ಚ.ಮೀ.

ಆದರೆ ಸೂಚಿತ ನಕ್ಷೆಯಂತೆ, 2007–08ರಲ್ಲಿನ ಎಸ್.ಆರ್.ದರದಂತೆ ಕೇಂದ್ರ ಸರ್ಕಾರವು ನೀಡಿದ ಮೊತ್ತದಲ್ಲಿ ನಿರ್ಮಿಸಲು ಸಾಧ್ಯವಾಗುವುದಿಲ್ಲ. ಪ್ರಸ್ತುತ ಮಾರುಕಟ್ಟೆ ದರದಲ್ಲಿ ಸೂಚಿತ ನಕ್ಷೆಯಂತೆ ಕೋಣೆ ನಿರ್ಮಿಸಲು ರೂ.1,85ಲಕ್ಷಗಳು ಬೇಕಾಗುತ್ತದೆ. ಕಟ್ಟಡ ನಿರ್ಮಾಣದ ಸಾಮಗ್ರಿಗಳ ಬೆಲೆ ಹೆಚ್ಚಾಗಿರುವುದರಿಂದ ರಾಜ್ಯ ಸರ್ಕಾರದಿಂದ ಮ್ಯಾಚಿಂಗ್ ಗ್ರ್ಯಾಂಟ್‌ನ ಅವಶ್ಯಕತೆ ಇರುತ್ತದೆ. ಎನ್.ಆರ್.ಇ.ಜಿ.ಎ.,ರಡಿಯಲ್ಲಿ ಲೇಬರ್ ಕಾಂಪೋನೆಂಟ್ ಉಪಯೋಗಿಸಿ ನಿರ್ಮಾಣ ಮಾಡಲು ಸರ್ಕಾರ ಆದೇಶಿಸಿದೆ.

## ಪಾತ್ರೆ ಪರಿಕರಗಳ ಖರೀದಿ ಬಗ್ಗೆ:–

ಕಾರ್ಯಕ್ರಮದ ಪ್ರಾರಂಭದಲ್ಲಿ ಪಾತ್ರೆ ಪರಿಕರ ಹಾಗೂ ಸ್ಟೌವ್ ಖರೀದಿಸಲು ರಾಜ್ಯ ಸರ್ಕಾರವು ಪ್ರತಿ ಅಡುಗೆ ಕೇಂದ್ರಕ್ಕೆ ರೂ.5,000/–ರಂತೆ ಅನುದಾನ ನೀಡಿದೆ. 2006–07ನೇ ಸಾಲಿನಿಂದ ಕೇಂದ್ರ ಸರ್ಕಾರವು ಪಾತ್ರೆ ಮತ್ತು ಸ್ಟೌವ್ ದುರಸ್ತಿಗಾಗಿ ಹಣ ಬಿಡುಗಡೆ ಮಾಡಿದ್ದು ಅದರ ವಿವರ ಕೆಳಕಂಡಂತಿದೆ.

| ವರ್ಷ | ಮಂಜೂರಾತಿ | | ಖರೀದಿ ಪೂರ್ಣವಾಗಿರುವುದು | | ಬಾಕಿ | ಶೇ | ಷರಾ |
|---|---|---|---|---|---|---|---|
| | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | | | |
| 2006–07 | 14401 | 720.05 | 14401 | 720.05 | 0 | 100 | ಖರೀದಿ ಆಗಿರುತ್ತದೆ. |
| 2007–08 | 16290 | 814.50 | 16290 | 814.50 | 0 | 100 | ಖರೀದಿ ಆಗಿರುತ್ತದೆ. |
| | 900 | 45.00 | 900 | 45.00 | 0 | 100 | ಖರೀದಿ ಆಗಿರುತ್ತದೆ. |

## ಶಾಲಾ ಕೈತೋಟ:–

ಜಮೀನು ಹಾಗೂ ನೀರಿನ ವ್ಯವಸ್ಥೆಯನ್ನು ಹೊಂದಿರುವ ಶಾಲೆಗಳಲ್ಲಿ ಶಾಲಾ ಕೈತೋಟ ಬೆಳೆಸಲು ಪ್ರತಿ ಶಾಲೆಗೆ ರೂ.3,500/–ರಂತೆ ಒಟ್ಟು 19375 ಶಾಲೆಗಳಿಗೆ ನೀಡಲಾಗಿದೆ. ಶಾಲೆಗಳಲ್ಲಿ ಕೈತೋಟಗಳನ್ನು ಬೆಳೆಸಲಾಗಿದೆ.

## ಪರಿವರ್ತನಾ ವೆಚ್ಚದ ಪರಿಷ್ಕರಣೆ ಬಗ್ಗೆ:-

ಸರ್ಕಾರವು ದಿನಾಂಕ:01.09.08ರಿಂದ ಜಾರಿಗೆ ಬರುವಂತೆ ಅಡುಗೆ ತಯಾರಿಕಾ ವೆಚ್ಚ ಮತ್ತು ಅಡುಗೆ ನೌಕರರಿಗೆ ಸಹಾಯಧನ ಹೆಚ್ಚಿಸಿ ಆದೇಶಿಸಿದೆ. ಪ್ರಾಥಮಿಕ ಶಾಲೆಗಳ 1 ರಿಂದ 7ನೇ ತರಗತಿ ಮಕ್ಕಳಿಗೆ ಪರಿವರ್ತನಾ ವೆಚ್ಚವನ್ನು ರೂ.1.80ರಂತೆ ನೀಡಲಾಗುತ್ತಿದೆ. ಪ್ರೌಢ ಶಾಲೆಗಳ 8 ರಿಂದ 10ನೇ ತರಗತಿ ಮಕ್ಕಳಿಗೆ ಪರಿವರ್ತನಾ ವೆಚ್ಚವನ್ನು ರೂ.2.20ರಂತೆ ನೀಡಲಾಗುತ್ತಿದೆ. ಅಕ್ಷರ ದಾಸೋಹ ಕಾರ್ಯಕ್ರಮದಡಿ ಕಾರ್ಯನಿರ್ವಹಿಸುತ್ತಿರುವ ಅಡುಗೆ ಸಿಬ್ಬಂದಿಯವರಿಗೆ ಗೌರವ ಧನವನ್ನು ಕೆಳಕಾಣಿಸಿರುವಂತೆ ಹೆಚ್ಚಿಸಲಾಗಿದೆ.

| | ಹಿಂದೆ ಇದ್ದ ದರ | ಪರಿಷ್ಕೃತ ದರ |
|---|---|---|
| ಮುಖ್ಯ ಅಡುಗೆಯವರು | ರೂ. 800.00 | ರೂ.1100.00 |
| ಅಡುಗೆಯವರು | ರೂ. 550.00 | ರೂ.1000.00 |
| ಸಹಾಯಕ ಅಡುಗೆಯವರು | ರೂ. 500.00 | ರೂ.1000.00 |
| ಸಹಾಯಕರು | ರೂ. 400.00 | ರೂ.1000.00 |

- **ಕೇಂದ್ರ ಸರ್ಕಾರ ದಿನಾಂಕ:01.12.2009ರಿಂದ ಅಡುಗೆ ತಯಾರಕರಿಗೆ ಸಂಭಾವನೆಯನ್ನು ತಿಂಗಳಿಗೆ ರೂ.1,000/-ದಂತೆ ನಿಗದಿಗೊಳಿಸಿದೆ. ಸದರಿ ಸಂಭಾವನೆಯನ್ನು ಕೇಂದ್ರ ಸರ್ಕಾರ ಶೇ.75, ರಾಜ್ಯ ಸರ್ಕಾರ ಶೇ.25ರ ಆಧಾರದಲ್ಲಿ ಪಾವತಿಸಬೇಕಾಗುತ್ತದೆ.**

ಅಕ್ಷರ ದಾಸೋಹ ಕಾರ್ಯಕ್ರಮಕ್ಕಾಗಿ ಬಿಡುಗಡೆ ಮಾಡಿರುವ ಆಯವ್ಯಯದ ವರ್ಷವಾರು ವಿವರ ಕೆಳಕಂಡಂತಿದೆ.

**(ರೂ. ಲಕ್ಷಗಳಲ್ಲಿ)**

| **ವರ್ಷ** | **ಬಿಡುಗಡೆಯಾದ ಅನುದಾನ** | | | **ಖರ್ಚು** |
|---|---|---|---|---|
| | **ರಾಜ್ಯ** | **ಕೇಂದ್ರ** | **ಒಟ್ಟು** | |
| **2008-09** | 17114.14 | 20776.14 | 37890.28 | 30329.81 |
| **2009-10** | 22298.55 | 23425.56 | 45724.11 | 27405.82 |
| **2010-11** | 16923.84 | 46251.44 | 60158.25 | 60158.25 |

## ಸುವರ್ಣ ಆರೋಗ್ಯ ಚೈತನ್ಯ ಕಾರ್ಯಕ್ರಮ:-

ಸುವರ್ಣ ಆರೋಗ್ಯ ಚೈತನ್ಯ ಕಾರ್ಯಕ್ರಮವನ್ನು 2006-07ನೇ ಸಾಲಿನಿಂದ ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಕ್ರಮದಡಿ ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಶಾಲೆಗಳಲ್ಲಿನ 1 ರಿಂದ 10 ನೇ ತರಗತಿ ವಿದ್ಯಾರ್ಥಿಗಳ ಆರೋಗ್ಯ ತಪಾಸಣೆಯನ್ನು ಕೈಗೊಳ್ಳಲಾಗುತ್ತಿದೆ. 2009-10ನೇ ಸಾಲಿನಲ್ಲಿ ಆಗಸ್ಟ್ ತಿಂಗಳಿನಲ್ಲಿ ಕಾರ್ಯಕ್ರಮವು ಹಮ್ಮಿಕೊಂಡು ಮುಕ್ತಾಯಗೊಳಿಸಿದೆ. ಸರ್ವ ಶಿಕ್ಷಣ ಅಭಿಯಾನ ಮತ್ತು ಎನ್.ಆರ್.ಹೆಚ್.ಎಂ. ವತಿಯಿಂದ ಹೆಲ್ತ್ ಕಾರ್ಡ್‌ಗಳನ್ನು ಮುದ್ರಿಸಿ ಶಾಲೆಗಳಿಗೆ ವಿತರಿಸಿದೆ. ಇಂಧನ ವೆಚ್ಚಕ್ಕಾಗಿ ಪ್ರತಿ ತಾಲ್ಲೂಕಿಗೆ ರೂ.50,000/ದಂತೆ ರೂ.96.10 ಲಕ್ಷಗಳನ್ನು ಮಧ್ಯಾಹ್ನ ಉಪಹಾರ ಯೋಜನೆಯ ಲೆಕ್ಕ ಶೀರ್ಷಿಕೆಯಡಿ ಭರಿಸಲಾಗಿದೆ.

ಕಾರ್ಯಕ್ರಮದ ಅನುಷ್ಠಾನಕ್ಕೆ ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳು ಆದ್ಯಕ್ಷರು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಉಪಾಧ್ಯಕ್ಷರಾಗಿರುವ ಸಮಿತಿಯನ್ನು ರಚಿಸಿದ್ದು, ಜಿಲ್ಲೆಯ ಆರೋಗ್ಯಾಧಿಕಾರಿಗಳು ಮತ್ತು ಉಪನಿರ್ದೇಶಕರು ಮತ್ತಿತರ ಅಧಿಕಾರಿಗಳು ಸದಸ್ಯರಿರುತ್ತಾರೆ.

2008-09ನೇ ಸಾಲಿನಲ್ಲಿ ತಪಾಸಣೆಗೊಳಪಟ್ಟ ವಿದ್ಯಾರ್ಥಿಗಳ ಸಂಖ್ಯೆ 8528004 ಇದರಲ್ಲಿ 1415 ವಿದ್ಯಾರ್ಥಿಗಳಿಗೆ ತೀವ್ರತರವಾದ ಖಾಯಿಲೆಗಳಿಗೆ ಯಶಸ್ವಿನಿ ನೆಟ್‌ವರ್ಕ್ ಆಸ್ಪತ್ರೆಗಳಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಹಯೋಗದೊಂದಿಗೆ ಚಿಕಿತ್ಸೆ ನೀಡಲಾಗಿದೆ. ಇದಕ್ಕೆ ತಗಲುವ ಪೂರ್ಣ ವೆಚ್ಚವನ್ನು ಎನ್.ಆರ್.ಹೆಚ್.ಎಂ. ವತಿಯಿಂದ ರೂ.778.39 ಕೋಟಿ ಖರ್ಚು ಭರಿಸಲಾಗಿದೆ.

2009–10ನೇ ಸಾಲಿಗೆ ಸುವರ್ಣ ಆರೋಗ್ಯ ಮಾಸಾಚರಣೆ ಎಂದು ದಿನಾಂಕ:01.08.09ರಿಂದ 30.08.2009ರವರೆಗೆ ಹಮ್ಮಿಕೊಳ್ಳಲಾಗಿತ್ತು. ಒಟ್ಟು 6295371 ವಿದ್ಯಾರ್ಥಿಗಳನ್ನು ತಪಾಸಣೆಗೊಳಪಡಿಸಿ 1040 ವಿದ್ಯಾರ್ಥಿಗಳಿಗೆ ತೀವ್ರತರ ಖಾಯಿಲೆಗಳನ್ನು ಗುರ್ತಿಸಿ ಇದಕ್ಕೆ ತಗಲುವ ಪೂರ್ಣ ವೆಚ್ಚವನ್ನು ಎನ್.ಆರ್.ಹೆಚ್.ಎಂ.ವತಿಯಿಂದ ರೂ.400.44ಲಕ್ಷಗಳ ಖರ್ಚು ಭರಿಸಿರುತ್ತಾರೆ.

2010–11ನೇ ಸಾಲಿಗೆ ಸುವರ್ಣ ಆರೋಗ್ಯ ಕಾರ್ಯಕ್ರಮದ ಕೆಳಗೆ ಒಟ್ಟು 8608998 [93.34%] ವಿದ್ಯಾರ್ಥಿಗಳನ್ನು ತಪಾಸಣೆಗೊಳಪಡಿಸಿ 2538 ವಿದ್ಯಾರ್ಥಿಗಳಿಗೆ ತೀವ್ರತರ ಖಾಯಿಲೆಗಳನ್ನು ಗುರ್ತಿಸಿ ಇದಕ್ಕೆ ತಗಲುವ ಪೂರ್ಣ ವೆಚ್ಚವನ್ನು ಎನ್.ಆರ್.ಹೆಚ್.ಎಂ.ವತಿಯಿಂದ ರೂ..778.53 ಲಕ್ಷಗಳ ಖರ್ಚು ಭರಿಸಿರುತ್ತಾರೆ. 2010–11ನೇ ಸಾಲಿಗೆ ಸುವರ್ಣ ಆರೋಗ್ಯ ಮಾಸಾಚರಣೆ ಎಂದು ದಿ: 01.08.2010 ರಿಂದ 30.08.2010ರವರೆಗೆ ಹಮ್ಮಿಕೊಳ್ಳಲಾಗಿತ್ತು.

**ಮೌಲ್ಯಮಾಪನ:–**

ಅಕ್ಷರ ದಾಸೋಹ ಕಾರ್ಯಕ್ರಮದ 2008–09ನೇ ಸಾಲಿನ ಮೌಲ್ಯಮಾಪನ ಅಧ್ಯಯನವನ್ನು ಮೆ|| ಪ್ರೈಸ್ ವಾಟರ್ ಹೌಸ್ ಕೂಪರ್ಸ್, ಬೆಂಗಳೂರು ಅವರಿಗೆ ದಿನಾಂಕ:06.11.2008 ರಂದು ವಹಿಸಲಾಗಿದೆ. ಇಲಾಖೆಯ ಒಡಂಬಡಿಕೆಯೊಂದಿಗೆ ಸಂಸ್ಥೆಯವರು ಅಧ್ಯಯನ ಕಾರ್ಯಕ್ರಮವನ್ನು ನಡೆಸಿ ಅಂತಿಮ ವರದಿಯನ್ನು ಸಲ್ಲಿಸಿದ್ದಾರೆ.

**7. ಶುಲ್ಕ ಮರುಪಾವತಿ :**

"ಬಾಲೆಯೊಬ್ಬಳು ಕಲಿತರೆ ಇಡೀ ಕುಟುಂಬವೇ ಶಿಕ್ಷಣ ಪಡೆದಂತೆ" ಎಂಬ ಮಾತನ್ನು ಕಾರ್ಯರೂಪಕ್ಕೆ ತರುವ ದೃಷ್ಟಿಯಿಂದ ಪ್ರಪ್ರಥಮವಾಗಿ ಕರ್ನಾಟಕ ರಾಜ್ಯ ಸರ್ಕಾರವು ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಎಲ್ಲಾ ಹೆಣ್ಣು ಮಕ್ಕಳಿಗೆ ಉಚಿತ ಶಿಕ್ಷಣ ನೀಡುವ ದೃಷ್ಟಿಯಿಂದ ಸರ್ಕಾರೇತರ ಶುಲ್ಕ ಹಾಗೂ 6ನೇ, 7ನೇ, 8ನೇ, 9ನೇ ಮತ್ತು 10ನೇ ತರಗತಿ ಪರೀಕ್ಷಾ ಶುಲ್ಕ ವಿನಾಯಿತಿ ನೀಡಲಾಗಿದೆ.

**8. ಪ್ರತಿಭಾ ಕಾರಂಜಿ :**

2011–12 ನೇ ಸಾಲಿಗೆ "ಪ್ರತಿಭಾ ಕಾರಂಜಿ" ಎಂಬ ಪ್ರತಿಭೆಯನ್ನು ಗುರುತಿಸುವ ಕಾರ್ಯಕ್ರಮಕ್ಕೆ ರೂ. **250.00** ಲಕ್ಷಗಳನ್ನು ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಬಿಡುಗಡೆ ಮಾಡಲಾಗಿದೆ. ಜಿಲ್ಲಾ ಉಪನಿರ್ದೇಶಕರು ತಮ್ಮ ಹಂತದ ಸಂಪನ್ಮೂಲಗಳನ್ನು ಉಪಯೋಗಿಸಿಕೊಂಡು ಕಾರ್ಯಕ್ರಮಗಳನ್ನು ಫಲಕಾರಿಯಾಗಿ ನಡೆಸಲು ಸೂಚಿಸಲಾಗಿದೆ.

**9. ಶಾಲೆಗಳ ಕಡ್ಡಾಯ ಮತ್ತು ವ್ಯಾಪಕ ತಪಾಸಣೆ :**

ಶಾಲೆಯ ಶೈಕ್ಷಣಿಕ ಗುಣಮಟ್ಟ ಉತ್ತಮಪಡಿಸಲು ಶಿಕ್ಷಕರಿಗೆ ಮಾರ್ಗದರ್ಶನ ನೀಡಲು ಬ್ಲಾಕ್ ಹಂತದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಹಂತ ಹಂತವಾಗಿ ಸರ್ಕಾರಿ ಜೀಪುಗಳನ್ನು ಒದಗಿಸಿ ವ್ಯಾಪಕವಾಗಿ ಶಾಲೆಗಳನ್ನು ಭೇಟಿ ಮಾಡಿ ಶಿಕ್ಷಕರಿಗೆ ಮಾರ್ಗದರ್ಶನ ಹಾಗೂ ಮೇಲ್ವಿಚಾರಣೆ ಮಾಡುವಂತೆ ಕ್ರಮ ತೆಗೆದುಕೊಳ್ಳಲಾಗಿದೆ. ಪ್ರಸ್ತುತ ಚಾಲ್ತಿಯಲ್ಲಿರುವ ಅಭ್ಯಾಸಗಳಲ್ಲಿ ಸೂಕ್ತ ಬದಲಾವಣೆಗಳನ್ನು ತಂದು ನಿರೀಕ್ಷಿತ ಗುಣಮಟ್ಟವನ್ನು ತಲುಪಲು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.

**10. ಶಾಲೆಗಳಲ್ಲಿ ಕಲಿಕೆ ಆಧಾರದ ಚಟುವಟಿಕೆಗಳು :**

ಶೈಕ್ಷಣಿಕ ಸಂಶೋಧನೆ ಆಧಾರದ ಮೇಲೆ ಕಲಿಕೆ ಸಂಬಂಧವಾಗಿ ಪ್ರಥಮ ವರ್ಷದಲ್ಲಿ ಪ್ರಾಥಮಿಕ ಶಿಕ್ಷಣದಲ್ಲಿ ಮಕ್ಕಳ ಕಲಿಕಾ ಭಾಷೆಯು ಓದುವ, ಬರೆಯುವ ಮತ್ತು ಸಂಪರ್ಕ, ಅಂಕಗಣಿತ ಕುಶಲ ಕಾರ್ಯಕ್ರಮಗಳು ಮತ್ತು ನೈಸರ್ಗಿಕ ಪರಿಸರ ವಿಜ್ಞಾನ ಹಾಗೂ ಸಾಮಾಜಿಕ ಆಧಾರಗಳು ವಿಶ್ವವ್ಯಾಪಿಯಾಗಿದೆ. ಒಟ್ಟಿನಲ್ಲಿ ಸ್ಪಷ್ಟವಾಗಿ ಅರ್ಥವಾಗುವ ಮತ್ತು ತಿಳಿಯುವ ಚಟುವಟಿಕೆಗಳನ್ನು ಗೊತ್ತುಪಡಿಸಲಾಗಿದೆ. ಈ ಚಟುವಟಿಕೆಗಳು ವಿನ್ಯಾಸ ಮೂಲಕ ಶಾಲಾ ಪಾಠಕ್ರಮವಾಗಿದೆ. ಎಲ್ಲಾ ಶಾಲೆಗಳಲ್ಲಿ ಕಲಿಕಾ ಆಧಾರಿತ ಚಟುವಟಿಕೆಗಳ ಜೊತೆಗೆ ವಿವಿಧ ವರ್ಗದ ಮೌಲ್ಯಾಧಾರಿತ ಚಟುವಟಿಕೆ ಮತ್ತು 5ನೇ ತರಗತಿಯ ಎಲ್ಲಾ ಕಿರಿಯ ಪ್ರಾಥಮಿಕ ಶಾಲೆಗಳಲ್ಲಿ 30 ರಿಂದ 50 ಕ್ಕಿಂತ ಮೀರದಂತೆ ನಿರ್ದಿಷ್ಟವಾಗಿ ಮಕ್ಕಳ ದಾಖಲಾತಿ ಇರುವಂತೆ ನಿರ್ದೇಶಿಸಲಾಗಿದೆ. ನಲಿ–ಕಲಿಯನ್ನು ಶಾಲೆಗಳಲ್ಲಿ ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆಯ ಪ್ರಾರಂಭದಲ್ಲಿಯು ಸಹ ನಡೆಸಲಾಗುತ್ತಿದೆ. ಈ ಕಾರ್ಯಕ್ರಮವನ್ನು 2005–06ರಲ್ಲಿ ವಿಸ್ತರಿಸಲಾಗಿತ್ತು ಇದನ್ನು 2006–07ರಲ್ಲೂ ವಿಸ್ತರಿಸಲಾಗಿದೆ ಮತ್ತು 2008–09 ರಲ್ಲಿ ಮುಂದುವರಿಸಲಾಗಿದೆ.

2011–12 ನೇ ಸಾಲಿನಲ್ಲಿ ಎಲ್ಲಾ ಸರ್ಕಾರಿ ಶಾಲೆಗಳಲ್ಲಿ 1 ಮತ್ತು 2ನೇ ತರಗತಿಯ ನಲಿಕಲಿಯನ್ನು ಕಲಿಕೆಯನ್ನು ಅಳವಡಿಸಲಾಗಿದೆ. ಎಲ್ಲಾ ಶಾಲೆಗಳಲ್ಲಿ ಅಂಕಗಣಿತದ ನಲಿಕಲಿಕೆಗೆ ಕಲಿಕಾ ಸಾಮಾಗ್ರಿಗಳನ್ನು ಒದಗಿಸಲಾಗಿದೆ. ಎಲ್ಲಾ ಶಾಲಾ ಶಿಕ್ಷಕರಿಗೆ ನಲಿ–ಕಲಿ ತರಬೇತಿ ನೀಡಲಾಗಿದೆ.

## 11. 2011–12 ನೇ ಸಾಲಿನಲ್ಲಿ ಪಾಲಿಸಿ ಪ್ಲಾನಿಂಗ್ ಘಟಕದ ಚಟುವಟಿಕೆಗಳು

2010–11ನೇ ಸಾಲಿನಲ್ಲಿ ರಾಜ್ಯದ 13 ಜಿಲ್ಲೆಗಳಲ್ಲಿ ನಿರ್ವಹಣಾ ಅಭಿವೃದ್ಧಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಯ್ತು. ಈ ಕಾರ್ಯಕ್ರಮದಲ್ಲಿ 328 ಕ್ಷೇತ್ರ/ ಸಮೂಹ ಸಂಪನ್ಮೂಲ ವ್ಯಕ್ತಿಗಳು (ಃಖಅ/ಅಖಅ) ಭಾಗವಹಿಸಿದ್ದು, ಕೆಲವು ಜಿಲ್ಲೆಗಳಲ್ಲಿ 84 ಶಿಕ್ಷಣ ಸಂಪನ್ಮೂಲ ಶಿಕ್ಷಕ (ಖಇಖಿ) ರೂ ಸೇರಿದ್ದಾರೆ. ಈ ಒಟ್ಟಾರೆ ಕಾರ್ಯಕ್ರಮದಲ್ಲಿ 484 ಜನರು 242 ಗುಣಮಟ್ಟ ಅಭಿವೃದ್ಧಿ ಪ್ರಕಲ್ಪಗಳನ್ನು ಮೊದಲ ಬಾರಿಗೆ ತಮ್ಮ ಕಾರ್ಯಕ್ಷೇತ್ರಗಳಲ್ಲಿ ಅನುಷ್ಠಾನಗೊಳಿಸುತ್ತಿದ್ದು, 431 ಜನರು 215 ಪ್ರಕಲ್ಪಗಳನ್ನು ಎರಡನೇ ಬಾರಿಗೆ ಅನುಷ್ಠಾನಗೊಳಿಸುತ್ತಿದ್ದಾರೆ. ಇವರು ಈಗಾಗಲೇ ಕಳೆದ ಸಾಲಿನಲ್ಲಿ ತರಬೇತುಗೊಂಡ 1400 ಜನರ ಗುಂಪಿನಿಂದ ಆಯ್ಕೆಯಾಗಿರುತ್ತಾರೆ.

ಶೈಕ್ಷಣಿಕ ನಾಯಕತ್ವದ ಬಹುಪಾಲು ನಾಯಕರು ಶಾಲಾ ಮುಖ್ಯಸ್ಥರು. ಪಾಲಿಸಿ  ಪ್ಲಾನಿಂಗ್ ಘಟಕವು ಶೈಕ್ಷಣಿಕ ಸಹಭಾಗಿತ್ವದಲ್ಲಿ ಅಜೀಂ ಪ್ರೇಂ ಜೀ ಪ್ರತಿಷ್ಠಾನ ( ಎಪಿಎಫ್) ಸೆಂಟರ್ ಫಾರ್ ಲೀಡರ್‌ಶೀಪ್ ಅಂಡ್ ಮ್ಯಾನೇಜ್ ಮೆಂಟ್ ಇನ್ ಪಬ್ಲಿಕ್ ಸರ್ವೀಸಸ್ (ಸಿ ಲ್ಯಾಂಪ್ಸ್), ಎಜುಕೇಷನ್ ಫಾರ್ ಇಂಟಿಗ್ರೇಟಿಂಗ್ ಲೈಫ್ (ಇ ಫಿಲ್) ಹಾಗೂ ಎಂ.ಡಿ.ಪಿ ತರಬೇತಿ ಪಡೆದ ಬಿ.ಆರ್.ಪಿ ರವರೊಂದಿಗೆ ಸೇರಿ 'ಶಾಲಾ ನಾಯಕತ್ವ ಅಭಿವೃದ್ಧಿ ಕಾರ್ಯಕ್ರಮ' ವೆಂಬ ಕಾರ್ಯಕ್ರಮವನ್ನು ಯೋಜಿಸಿ, ಪ್ರಾಯೋಗಿಕವಾಗಿ ನಾಲ್ಕು ಜಿಲ್ಲೆಗಳಲ್ಲಿ  ಅನುಷ್ಠಾನಗೊಳ್ಳುತ್ತಿದೆ. ಈ ಕಾರ್ಯಕ್ರಮದಲ್ಲಿ ಮೊದಲ ಹಂತದಲ್ಲಿ ನಾಲ್ಕು ಜಿಲ್ಲೆಗಳಿಂದ (ಕೋಲಾರ, ಶಿವಮೊಗ್ಗ, ಕೊಡಗು, ಹಾಸನ) 82 ಜನ ಕ್ಷೇತ್ರ ಸಂಪನ್ಮೂಲ ವ್ಯಕ್ತಿಗಳನ್ನು ಈ ಕಾರ್ಯಕ್ರಮದ ಸುಗಮಕಾರರಾಗಿ ಅಭಿವೃದ್ಧಿಗೊಳಿಸಲು ಕಾರ್ಯರಂಭಿಸಲಾಗಿದೆ. 2009–10 ನೇಸಾಲಿನಲ್ಲಿ ಈ ಕಾರ್ಯಕ್ರಮದ ವಿಸ್ತೃತ ಕಾರ್ಯನಕ್ಷೆ, ಯೋಜನಾ ನಕ್ಷೆ ಪೂರ್ಣಗೊಂಡಿದೆ.

ಶೈಕ್ಷಣಿಕ ನಾಯಕತ್ವ ಮತ್ತು ನಿರ್ವಹಣಾ ಕೌಶಲ್ಯಗಳನ್ನು ಹಾಗೂ ಜ್ಞಾನವನ್ನು ಹೆಚ್ಚಿಸಲು ಸ್ಥಳೀಯ ಪರಿಸ್ಥಿತಿಗಳಿಗನುಗುಣವಾದ, ಹಾಗೂ ಸ್ಥಳೀಯ ಭಾಷೆಯಲ್ಲಿ ನಾಯಕತ್ವ ಮತ್ತು ನಿರ್ವಹಣೆ ಕುರಿತ 20 ವಿವಿಧ ವಿಷಯಗಳಿಗೆ ಸಂಬಂಧಿಸಿದ ಶೈಕ್ಷಣಿಕ ಸಾಮಾಗ್ರಿಗಳನ್ನು ಅಭಿವೃದ್ಧಿಪಡಿಸಲು ಕಾರ್ಯಾರಂಭಿಸಲಾಗಿದೆ. ಈ ಎಲ್ಲಾ ವಿಷಯವಾರು ಶೈಕ್ಷಣಿಕ ಪುಸ್ತಕಗಳು ಬಹುತೇಕ ಶಿಕ್ಷಣ ಇಲಾಖೆಯ ಅಧಿಕಾರಿಗಳಿಂದ ರಚಿಸಲ್ಪಡುತ್ತಿರುವುದು ಈ ಕಾರ್ಯಕ್ರಮದ ವಿಶೇಷ ಅಂಶಗಳಲ್ಲೊಂದು.

ಮಾಹಿತಿ ಸಂವಹನ ತಂತ್ರಜ್ಞಾನ (ಖಅಖಿ) ದ ಬಳಕೆಯನ್ನು ಬಲವರ್ಧನೆಗೊಳಿಸಲು ಡಯಟ್ ಗಳಿಗಾಗಿ ವಿಶೇಷ ಕಾರ್ಯಕ್ರಮವನ್ನು ಯೋಜಿಸಲಾಗಿತ್ತು. ರಾಜ್ಯದ ಎಲ್ಲಾ ಡಯಟ್ ಗಳಿಂದ 104 ಜನರಿಗೆ 8 ದಿನಗಳ ಮುಂದುವರಿದ (ಸುಧಾರಿತ) ಕಂಪ್ಯೂಟರ್ ತರಬೇತಿಯನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಆಖಖಇ/ ಇಒಖಖ ನ ದತ್ತಾಂಶಗಳ ವಿಶ್ಲೇಷಣೆ, ಶಾಲಾವಾರು ಮಾಹಿತಿ ವಿಶ್ಲೇಷಣೆ, ವಾರ್ಷಿಕ ಕ್ರಿಯಾ ಯೋಜನೆಯ ತಯಾರಿಕೆ/ ನಿಗಾವಣೆ, ವಿದ್ಯಾರ್ಥಿಗಳ ಕಲಿಕಾ ಮಟ್ಟದ ನಿಗಾವಣೆ ಹಾಗೂ ಡಯಟ್ ಉಪನ್ಯಾಸಕರಿಗೆ ತಮ್ಮದೇ ವಿಷಯವಾರು ವಿವಿಧ ದತ್ತಾಂಶಗಳ ಸಂಗ್ರಹಣೆ, ವಿಶ್ಲೇಷಣೆ ಕುರಿತು ತರಬೇತಿ ನೀಡಲಾಯ್ತು. ಇದಲ್ಲದೇ 'ಓಪನ್ ಆಫೀಸ್' (ತಂತ್ರಾಂಶ) ದ ಬಳಕೆ ಉಂಟು (ಗಛಣಟಣಿಣ) ಉಟಿಗ, ಮಟಣಥ ಸಾಫ್ಟ್‌ವೇರ್ ಗಳ ಬಳಕೆ ಹಾಗೂ ವಿವಿಧ ಉಪಯೋಗಗಳನ್ನು ಹಾಗೂ ಉಚಿತ ತಂತ್ರಾಂಶಗಳನ್ನು ವಿವರಿಸಲಾಯ್ತು. ಇ–ಮೇಲ್ ಕಳುಹಿಸುವ ಬಗೆ ವೆಬ್‌ಸೈಟ್‌ಗಳಲ್ಲಿ ವಿಷಯವಾರು ಮಾಹಿತಿ ಹುಡುಕುವ ಬಗ್ಗೆ ಹಾಗೂ ಜಾಲ ತಾಣಗಳಲ್ಲಿ ವಿಷಯ ಹಂಚಿಕೆಯ ವಿವಿಧ ವೇದಿಕೆಗಳಲ್ಲಿ ಚರ್ಚಿಸುವ ಬಗ್ಗೆ ವಿವರಿಸಲಾಯ್ತು.

ನಮ್ಮ ಶಾಲೆ' ಯೋಜನೆಯು ಆಯ್ದ ನಾಲ್ಕು ಕ್ಲಸ್ಟರ್‌ಗಳಲ್ಲಿ (ಮಿರ್ಜಾನ್, ಗಾವಡಗೆರೆ, ಕುಂದೂರು, ರುಕ್ಮಾಪುರ) ಯಶಸ್ವಿಯಾಗಿ ನಡೆಯತ್ತಿದ್ದು ಸಮುದಾಯದ ಸದಸ್ಯರನ್ನು ಶಾಲೆಯ ಶೈಕ್ಷಣಿಕ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಮಾಡಲು ಸಹಕಾರಿಯಾಗಿದೆ.

ಈಗಾಗಲೇ ಮಿರ್ಜಾನ್ ಮತ್ತು ಗಾವಡಗೆರೆ ಕ್ಲಸ್ಟರ್‌ಗಳಲ್ಲಿ ಸುಸ್ಥಿರ ಹಂತ ಮುಗಿಯಲಿದ್ದು, ಕುಂದೂರು ಮತ್ತು ರುಕ್ಮಾಪುರ ಅನುಷ್ಠಾನ ಹಂತದಲ್ಲಿದೆ.

- ಎಲ್ಲಾ 4 ಕ್ಲಸ್ಟರ್‌ಗಳ ಪ್ರಮುಖ ಪಾಲುದಾರರಿಗೆ ಸಾಮರ್ಥ್ಯ ಅಭಿವೃದ್ಧಿ ತರಬೇತಿಗಳು ಪೂರ್ಣಗೊಂಡಿದೆ.
- ಮಿರ್ಜಾನ್ ಮತ್ತು ಗಾವಡಗೆರೆ ಕ್ಲಸ್ಟರ್‌ಗಳಲ್ಲಿ 'ಶಾಲಾ ಸಮುದಾಯ ಸಹಭಾಗಿತ್ವ ಕ್ರಿಯಾ ಯೋಜನೆ' ಪ್ರಕ್ರಿಯೆ ಪೂರ್ಣಗೊಂಡಿದೆ. ಸಮುದಾಯದ ಪ್ರಮುಖ ಪಾಲುದಾರರು ಈ ಕ್ರಯಾಯೋಜನೆಯ ಅನುಷ್ಠಾನದಲ್ಲಿ ಪಾಲ್ಗೊಳ್ಳುತ್ತಿರುವುದು ಕಂಡು ಬರುತ್ತಿದೆ. ಕುಂದೂರು ಕ್ಲಸ್ಟರ್‌ನ ಒಟ್ಟು 19 ಶಾಲೆಗಳ ಪೈಕಿ 16 ಶಾಲೆಗಳಲ್ಲಿ ಸಮುದಾಯ ಸಹಭಾಗಿತ್ವ ಕ್ರಿಯಾ ಯೋಜನೆಗಳು

ಮುಗಿದಿರುತ್ತದೆ. ಸುರಪುರದಲ್ಲಿ ಸಮುದಾಯ ಸಹಭಾಗಿತ್ವ ಕ್ರಿಯಾ ಯೋಜನೆ ಕಾರ್ಯ ಪ್ರಗತಿಯಲ್ಲಿದ್ದು 2 ಶಾಲೆಗಳಲ್ಲಿ ಸಂಪೂರ್ಣಗೊಂಡಿದೆ.

- ನಮ್ಮ ಶಾಲೆ'ಯ ಸ್ಥಿತಿಗತಿ ಅಧ್ಯಯನದ ಆಂತರಿಕ ಮೌಲ್ಯ ಮಾಪನವನ್ನು 75 ಶಾಲೆಗಳ ಪೈಕಿ 71ರಲ್ಲಿ ಸಂಪೂರ್ಣಗೊಳಿಸಲಾಗಿದೆ. ಅದರಂತೆ ಸುಗಮಕಾರರಿಗೆ ಮತ್ತು ಭಾಗೀದಾರರಿಗೆ ಮುಂದಿನ ಸುಸ್ಥಿರ ಹಂತಕ್ಕೆ ಅಗತ್ಯವಿರುವ ಸಾಮರ್ಥ್ಯ ಅಭಿವೃದ್ಧಿ ಯೋಜನೆಯನ್ನು ತಾಂತ್ರಿಕ ಸಲಹೆ ಸಂಸ್ಥೆಯಾದ ಕೆ.ಎಸ್.ಟಿ.ಸಿಯು ನಿರ್ವಹಿಸುತ್ತಿದೆ.

- ಸುಸ್ಥಿರ ಹಂತದಲ್ಲಿ, ಸಮುದಾಯದ ಪಾಲುದಾರರನ್ನು ಮತ್ತಷ್ಟು ಹತ್ತಿರ ತರುವ ನಿಟ್ಟಿನಲ್ಲಿ ಕೇರಳದ ಕಾಸರಗೋಡು ಹಾಗೂ ದಕ್ಷಿಣ ಕನ್ನಡದ ಬೆಳ್ತಂಗಡಿ ಪ್ರದೇಶದ ಮಾದರಿ ಶಾಲೆ ಮತು ಗ್ರಾಮಪಂಚಾಯತ್‌ಗೆ ಈಗಾಗಲೇ ನಾಲ್ಕು ಕ್ಷೇತ್ರಭೇಟಿ ಕೈಗೊಳ್ಳಲಾಗಿದ್ದು ಒಟ್ಟು 220 ಭಾಗೀದಾರರನ್ನು ಪ್ರೇರೇಪಿಸಲಾಗಿದೆ. ಕ್ಷೇತ್ರ ಭೇಟಿಯಲ್ಲಿ ಭಾಗವಹಿಸಿದ ಸಮುದಾಯದ ಪಾಲುದಾರರು ತಮ್ಮ ತಮ್ಮ ಶಾಲಾವ್ಯಾಪ್ತಿಯಲ್ಲಿ (ಕೋಡಕಣಿ, ಯಳವಳ್ಳಿ, ಐಗಳಕುರುವೆ, ಚಿಕ್ಕಹಾಲಿವಾಣ ಬಡಾವಣೆ, ನೆಲಹೊನ್ನೆ ಕ್ಯಾಂಪ್ ಮತ್ತು ಗಾವಡಗೆರೆಗಳಲ್ಲಿ) ಗುಣಮಟ್ಟದ ಶಿಕ್ಷಣದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಂಡಿರುವುದು ಕಂಡುಬರುತ್ತಿದೆ.

ನಮ್ಮ ಶಾಲೆ' ಯೋಜನೆಯ ಅನ್ವಯ ಗುಣಮಟ್ಟದ ಶಿಕ್ಷಣಕ್ಕಾಗಿ ಪಾಲುದಾರರ ನಡುವೆ ಉತ್ತಮ ಬಾಂಧವ್ಯ ಮೂಡಿಸಲು ಈ ಕೆಳಗಿನ ಸಂವಹನ ಮಾಧ್ಯಮಗಳು ಪರಿಣಾಮಕಾರಿ ಎನಿಸಿವೆ.

ಶಾಲೆಯಲ್ಲಿ ತಲ್ಲೀನತೆ (ಖಿಝಿಂಂಟ ಖಟಂಡಿಝುಂಟ),

1. ಕ್ಷೇತ್ರ ಭೇಟಿ – ಮಾದರಿ ಶಾಲೆ ಮತ್ತು ಗ್ರಾಮ ಪಂಚಾಯತ್‌ಗೆ,
2. ಸಮುದಾಯ ಸಹಭಾಗಿತ್ವ ಕ್ರಿಯಾಯೋಜನೆ ರೂಪಿಸುವುದು,
3. ಆಪ್ತರಂಗಭೂಮಿ ಇತ್ಯಾದಿಗಳು.

ಈ ಸಂವಹನ ಮಾಧ್ಯಮಗಳನ್ನು ರಾಜ್ಯದ ಸರಕಾರಿ ಶಾಲೆಗಳಲ್ಲಿ, ಶಾಲೆ ಮತ್ತು ಸಮುದಾಯದ ನಡುವೆ ಉತ್ತಮ ಬಾಂಧವ್ಯ ಏರ್ಪಡಿಸುವುದಕ್ಕೆ ನೇರವಾಗಿ ಅಳವಡಿಸಿಕೊಳ್ಳಬೇಕಾಗಿದೆ.

11. <u>ಸಮುದಾಯದತ್ತ ಶಾಲೆ :</u>

ಪ್ರಾಥಮಿಕ ಶಿಕ್ಷಣವನ್ನು ಗುಣಾತ್ಮಕವಾಗಿ ಅಭಿವೃದ್ಧಿಗೊಳಿಸಲು ಸಮುದಾಯದ ಪಾಲ್ಗೊಳ್ಳುವಿಕೆ ಉತ್ತೇಜಿಸುವ ಸಲುವಾಗಿ ಈ ಕಾರ್ಯಕ್ರಮವನ್ನು ಹಮ್ಮಿಕೊಂಡು ಅನುಷ್ಠಾನಗೊಳಿಸಲಾಗುತ್ತಿದೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಅಧಿಕಾರಿಗಳು ಪ್ರಾಥಮಿಕ ಮತ್ತು ಪ್ರೌಢ ಶಾಲಾ ಶಿಕ್ಷಕರುಗಳು ಗ್ರಾಮಗಳಲ್ಲಿನ ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ ಭೇಟಿ ನೀಡಿರುತ್ತಾರೆ.

ಪೋಷಕರು, ಸಮುದಾಯದ ಸದಸ್ಯರು ಹಾಗೂ ಜನಪ್ರತಿನಿಧಿಗಳೊಡನೆ ಮಕ್ಕಳ ಶೈಕ್ಷಣಿಕ ಪ್ರಗತಿ, ಶಾಲೆಯ ಅವಶ್ಯಕತೆಗಳ ಬಗ್ಗೆ ಸಮಾಲೋಚಿಸುವ (ಕಾರ್ಯಕ್ರಮಗಳನ್ನು ಸಿದ್ಧಪಡಿಸುವ) ಮೂಲಕ "**ಶಾಲೆ ಸಮುದಾಯದ ಆಸ್ತಿ**" ಎಂಬುದನ್ನು ಮನವರಿಕೆ ಮಾಡಿಕೊಡುವ ಪ್ರಯತ್ನವಾಗಿದೆ. ಈ ಕಾರ್ಯಕ್ರಮವು 2000 ದ ನವೆಂಬರ್‌ನಿಂದ ಆರಂಭವಾಗಿದೆ. ಇದರ ಅನುಷ್ಠಾನದಿಂದ ವಿದ್ಯಾರ್ಥಿಗಳ ಹಾಜರಾತಿ, ಶಿಕ್ಷಕರ ಕಾರ್ಯ ನಿರ್ವಹಣೆ ಮತ್ತು ವಿದ್ಯಾರ್ಥಿಗಳ ಕಲಿಕೆಯಲ್ಲಿ ಸಾಕಷ್ಟು ಸುಧಾರಣೆ ಕಂಡು ಬಂದಿದೆ. ಶಾಲೆ ಹೊರಗಿನ ಮಕ್ಕಳನ್ನು ಶಾಲೆಗೆ ಸೇರಿಸಲು ಉತ್ತೇಜಿಸುವ ಸಲುವಾಗಿ ಮನೆಮನೆಗೆ ಹೋಗಿ ಅವರ ಪೋಷಕರನ್ನು ಸಂಪರ್ಕಿಸಲಾಗಿದೆ. ಗುಣಾತ್ಮಕ ಶಿಕ್ಷಣವನ್ನು ಒದಗಿಸಲು ಸಮುದಾಯವನ್ನು ತೊಡಗಿಸಿಕೊಳ್ಳಲಾಗುತ್ತಿದೆ.

12. <u>ಶಿಕ್ಷಣ ಸಂವಾದ :</u>

ಪ್ರತಿ ತಿಂಗಳು ದೂರದರ್ಶನ ಹಾಗೂ "ಆಕಾಶವಾಣಿಯಲ್ಲಿ ಶಿಕ್ಷಕರ ಸಂವಾದ" ಕಾರ್ಯಕ್ರಮ ಪ್ರಸಾರಗೊಳ್ಳುತ್ತದೆ. ಅಕ್ಟೋಬರ್ 2000 ರಿಂದ ಪ್ರಾರಂಭವಾಗಿರುವ ಈ ಕಾರ್ಯಕ್ರಮದಲ್ಲಿ ಸನ್ಮಾನ್ಯ ಶಿಕ್ಷಣ ಸಚಿವರೊಡನೆ ಆಸಕ್ತ ಪೋಷಕರ/ಸಾರ್ವಜನಿಕರ ಶೈಕ್ಷಣಿಕ ಸಮಸ್ಯೆಗಳ ನೇರ ಚರ್ಚೆ ನಡೆಸಬಹುದಾಗಿದೆ. ಈ ಕಾರ್ಯಕ್ರಮದಲ್ಲಿ ಶಿಕ್ಷಣದ ಗುಣಾತ್ಮಕ ಸುಧಾರಣೆಗೆ ಸಲಹೆಗಳನ್ನು ನೇರವಾಗಿ ಶಿಕ್ಷಣ ಸಚಿವರ ಗಮನಕ್ಕೆ ನೀಡುವ ಅವಕಾಶ ಸಾರ್ವಜನಿಕರಿಗೆ ಲಭ್ಯವಾಗಿರುವುದರ ಜೊತೆಗೆ ಶಿಕ್ಷಣದ ಮಹತ್ವದ ಅರಿವು ಸಾರ್ವಜನಿಕರಲ್ಲಿ ಉಂಟಾಗುತ್ತದೆ ಹಾಗೂ ಇದರೊಂದಿಗೆ ಸಾರ್ವಜನಿಕರ ಸಮಸ್ಯೆಗಳಿಗೆ ಸ್ಪಂದಿಸಬಹುದು.

13. <u>ಶಿಕ್ಷಣ ವಾರ್ತೆ :</u>

ಸಾರ್ವಜನಿಕ ಶಿಕ್ಷಣ ಇಲಾಖೆಯು ಕಳೆದ 7 ವರ್ಷಗಳಿಂದ ಪ್ರತಿ ತಿಂಗಳು ಶೈಕ್ಷಣಿಕ ಶಿಕ್ಷಣ ವಾರ್ತೆ ಪತ್ರಿಕೆಯನ್ನು ಪ್ರಕಟಿಸುತ್ತಿದೆ. ಈ ಪತ್ರಿಕೆಯು 1999 ರಲ್ಲಿ ದ್ವೈಮಾಸಿಕ ಪತ್ರಿಕೆಯಾಗಿ 4 ಪುಟಗಳನ್ನೊಳಗೊಂಡು ಪ್ರಾರಂಭವಾಯಿತು. ಪತ್ರಿಕೆಯ ವ್ಯಾಪ್ತಿ ಹಾಗೂ ವಿಷಯ ವಿಸ್ತಾರವನ್ನು ಹೆಚ್ಚಿಸುವ ದೃಷ್ಟಿಯಿಂದ 2002–03ರಲ್ಲಿ 4 ಪುಟಗಳಿಂದ 20 ಪುಟಗಳಿಗೆ ಹೆಚ್ಚಿಸಲಾಯಿತು.

2004–05ನೇ ಸಾಲಿನಿಂದ ಪತ್ರಿಕೆಯನ್ನು 32 ಪುಟಗಳಿಗೆ ಹೆಚ್ಚಿಸಲಾಯಿತು. ಪತ್ರಿಕೆಯು ಶಿಕ್ಷಣ ಇಲಾಖೆಯ ಸುದ್ದಿಗಳು, ಸುತ್ತೋಲೆಗಳು, ಆದೇಶಗಳು ಹಾಗೂ ಹೊಸ ಕಾರ್ಯಕ್ರಮಗಳೇ ಅಲ್ಲದೆ, ಶಿಕ್ಷಕರ ಹಾಗೂ ವಿದ್ಯಾರ್ಥಿಗಳ ಹೊಸ ಹೊಸ ಶೈಕ್ಷಣಿಕ ಪ್ರಯೋಗಗಳು, ಉತ್ತಮ ಲೇಖನಗಳು ಅತ್ಯುತ್ತಮ ಶಾಲೆಗಳ ಬಗ್ಗೆ ಮಾಹಿತಿ, ಪ್ರತಿಭಾವಂತ ವಿದ್ಯಾರ್ಥಿಗಳು, ಶಿಕ್ಷಕರು, ಶೈಕ್ಷಣಿಕವಾಗಿ ಅತ್ಯುತ್ತಮವಾಗಿ ಕಾರ್ಯ ನಿರ್ವಹಿಸಿದ ಅಧಿಕಾರಿಗಳು, ವಿವಿಧ ಯೋಜನೆಗಳ ಸಾಧನೆಗಳ ಪರಿಚಯ, ಇಲಾಖೆಗೆ ಸಂಬಂಧಿಸಿದ ಅಂಕಿ ಅಂಶಗಳು, ಖ್ಯಾತ ಶಿಕ್ಷಣ ತಜ್ಞರ ಲೇಖನಗಳು ಹೀಗೆ ಶಿಕ್ಷಣಕ್ಕೆ ಸಂಬಂಧಿಸಿದ ಹತ್ತು ಹಲವಾರು ವಿವರಗಳನ್ನು ಒಳಗೊಂಡ ಲೇಖನಗಳನ್ನು ಪ್ರಕಟಿಸಲಾಗುತ್ತದೆ.

ಪ್ರಧಾನ ಸಂಪಾದಕರಾದ ಮಾನ್ಯ ಆಯುಕ್ತರು ಹಾಗೂ ಸರ್ವಶಿಕ್ಷಣ ಅಭಿಯಾನದ ರಾಜ್ಯ ಯೋಜನಾ ನಿರ್ದೇಶಕರು ಸಂಪಾದಕೇತರ ಮುಖಾಂತರ ಶಿಕ್ಷಕರ ಕರ್ತವ್ಯ ಮಕ್ಕಳಲ್ಲಿ ಕಲಿಕೆ ಉಂಟು ಮಾಡುವ ಸಂಬಂಧ ಅನುಸರಿಸಬೇಕಾದ ಉತ್ತಮ ಮಾರ್ಗಗಳು ಇಲಾಖೆಯ ಯೋಜನೆಗಳ ಬಗ್ಗೆ ಪ್ರತಿ ತಿಂಗಳು ತಿಳಿಸುತ್ತಿರುತ್ತಾರೆ. ಸಾರ್ವಜನಿಕ ಶಿಕ್ಷಣ ಇಲಾಖೆಯ ಸರ್ವ ಶಿಕ್ಷಣ ಅಭಿಯಾನ ವತಿಯಿಂದ ಅರವತ್ತು ಸಾವಿರ ಪ್ರತಿಗಳನ್ನು ಮುದ್ರಿಸಿ ರಾಜ್ಯದ ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಿಗೆ ಉಚಿತ ಸರಬರಾಜು ಮಾಡಲಾಗುತ್ತಿದೆ. ಪತ್ರಿಕೆಯ ಮುದ್ರಣಕಾರ್ಯ ಹಾಗೂ ಸರಬರಾಜಿಗೆ ಸಂಬಂಧಿಸಿದಂತೆ ಎಲ್ಲಾ ವೆಚ್ಚವನ್ನು ಸರ್ವ ಶಿಕ್ಷಣ ಅಭಿಯಾನ ಭರಿಸುತ್ತಿದೆ. ಪ್ರತಿ ಸಂಚಿಕೆಯಲ್ಲಿ ರಾಜ್ಯದ ಒಂದು ಜಿಲ್ಲೆಯ ಸಂಪೂರ್ಣ ಶೈಕ್ಷಣಿಕ ವರದಿ– ಜಿಲ್ಲೆಯಲ್ಲಿ ಶತಮಾನಕಂಡ ಶಾಲೆಗಳು, ಶಿಕ್ಷಣ ತಜ್ಞರು, ಒಟ್ಟು ಶಾಲೆಗಳು, ಶಿಕ್ಷಕರ ಸಂಖ್ಯೆ, ಮಕ್ಕಳ ಸಂಖ್ಯೆ, ಕಲಿಕೆಗೆ ಪೂರಕವಾದ ಅಂಶಗಳು, ಜಿಲ್ಲೆಯಲ್ಲಿರುವ ಐತಿಹಾಸಿಕ ಸ್ಥಳಗಳು, ಹೀಗೆ ಜಿಲ್ಲೆಯ ಸಂಪೂರ್ಣ ಮಾಹಿತಿಯನ್ನು ಜಿಲ್ಲಾ ವರದಿ ಪ್ರತಿಬಿಂಬಿಸುತ್ತದೆ.

## 14. <u>ಉಚಿತ ಬೈಸಿಕಲ್ ಯೋಜನೆ: (ಹೆಣ್ಣು ಮಕ್ಕಳಿಗೆ)</u>

ಗ್ರಾಮೀಣ ಪ್ರದೇಶದ ಹೆಣ್ಣು ಮಕ್ಕಳು ದೂರದ ಹಳ್ಳಿಗಳಿಂದ ಶಾಲೆಗೆ ಬರುವಾಗ ಅನೇಕ ತೊಂದರೆಗಳನ್ನು ಅನುಭವಿಸುತ್ತಾರೆ ಎಂಬುದನ್ನು ಮನಗಂಡು ಸರ್ಕಾರವು ಬಡತನ ರೇಖೆಗಿಂತ ಕೆಳಗಿರುವ ಕುಟುಂಬದಲ್ಲಿ 7ನೇ ತರಗತಿ ಪಾಸು ಮಾಡಿ, 8ನೇ ತರಗತಿಗೆ ದಾಖಲಾಗಿ ಕಲಿಕೆ ಮುಂದುವರಿಸುವ ಹೆಣ್ಣು ಮಕ್ಕಳು ಮನೆಯಿಂದ ಶಾಲೆಗೆ ಹೋಗಿ ಬರಲು ಅನುಕೂಲ ಕಲ್ಪಿಸುವ ಜೊತೆಗೆ ಅವರಲ್ಲಿ ಧೈರ್ಯ ಮತ್ತು ಆತ್ಮ ವಿಶ್ವಾಸ ಮೂಡಿಸಲು ಪ್ರೇರಣೆ ನೀಡುವ ಸಲುವಾಗಿ ಸರ್ಕಾರಿ ವೆಚ್ಚದಲ್ಲಿ ಬೈಸಿಕಲ್ ನೀಡಲು ನಿರ್ಧರಿಸಿ 2006–07ನೇ ಸಾಲಿನಿಂದ ಈ ಯೋಜನೆ ಆರಂಭಗೊಂಡಿರುತ್ತದೆ.

2006–07ನೇ ಸಾಲಿನಲ್ಲಿ ಸರ್ಕಾರಿ ಮತ್ತು ಅನುದಾನಿತ ಶಾಲೆಗಳ 8ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಬಿಪಿಎಲ್ ಕುಟುಂಬಕ್ಕೆ ಸೇರಿದ (ಬಸ್ ಪಾಸ್ ಮತ್ತು ಹಾಸ್ಟೆಲ್ ಸೌಲಭ್ಯಹೊಂದಿರುವ ಮಕ್ಕಳನ್ನು ಹೊರತುಪಡಿಸಿ) 1,75,023 ಹೆಣ್ಣುಮಕ್ಕಳು ಹಾಗೂ 2,45,300 ಗಂಡು ಮಕ್ಕಳಿಗೆ ರೂ.85.33 ಕೋಟಿಗಳ ವೆಚ್ಚದಲ್ಲಿ ಸರ್ಕಾರದ ವತಿಯಿಂದ ಉಚಿತ ಬೈಸಿಕಲ್ ವಿತರಿಸಲಾಗಿದೆ.

2007–08ನೇ ಸಾಲಿನಲ್ಲಿ ಸರ್ಕಾರಿ ಮತ್ತು ಅನುದಾನಿತ ಶಾಲೆಗಳ 8ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಬಿಪಿಎಲ್ ಕುಟುಂಬಕ್ಕೆ ಸೇರಿದ (ನಗರಪಾಲಿಕೆ ವ್ಯಾಪ್ತಿಯಲ್ಲಿನ ಶಾಲೆಗಳ ಮಕ್ಕಳನ್ನು ಹಾಗೂ ಬಸ್ ಪಾಸ್ ಮತ್ತು ಹಾಸ್ಟೆಲ್ ಸೌಲಭ್ಯಹೊಂದಿರುವ ಮಕ್ಕಳನ್ನು ಹೊರತುಪಡಿಸಿ) 2,21,300 ಗಂಡು ಮಕ್ಕಳಿಗೆ ಮತ್ತು 2,13,700 ಹೆಣ್ಣು ಮಕ್ಕಳಿಗೆ ಒಟ್ಟು ರೂ.89.18 ಕೋಟಿಗಳ ವೆಚ್ಚದಲ್ಲಿ ಉಚಿತ ಬೈಸಿಕಲ್‌ಗಳನ್ನು ವಿತರಿಸಲಾಗಿದೆ.

2008–09ನೇ ಸಾಲಿನಲ್ಲಿ ಸರ್ಕಾರಿ ಮತ್ತು ಅನುದಾನಿತ ಶಾಲೆಗಳ 8ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಎಲ್ಲಾ ಮಕ್ಕಳಿಗೆ (ನಗರಪಾಲಿಕೆ ವ್ಯಾಪ್ತಿಯಲ್ಲಿನ ಶಾಲೆಗಳ ಮಕ್ಕಳನ್ನು ಹಾಗೂ ಬಸ್ ಪಾಸ್ ಮತ್ತು ಹಾಸ್ಟೆಲ್ ಸೌಲಭ್ಯಹೊಂದಿರುವ ಮಕ್ಕಳನ್ನು ಹೊರತುಪಡಿಸಿ) 6,66,222 ಮಕ್ಕಳಿಗೆ ಒಟ್ಟು ರೂ.159.69 ಕೋಟಿಗಳ ವೆಚ್ಚದಲ್ಲಿ ಉಚಿತ ಬೈಸಿಕಲ್‌ಗಳನ್ನು ವಿತರಿಸಲಾಗಿದೆ.

2009–10ನೇ ಸಾಲಿನಲ್ಲಿ ಸರ್ಕಾರಿ ಮತ್ತು ಅನುದಾನಿತ ಶಾಲೆಗಳ 8ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಎಲ್ಲಾ ಮಕ್ಕಳಿಗೆ (ನಗರಪಾಲಿಕೆ ವ್ಯಾಪ್ತಿಯಲ್ಲಿನ ಶಾಲೆಗಳ ಮಕ್ಕಳನ್ನು ಹಾಗೂ ಬಸ್ ಪಾಸ್ ಮತ್ತು ಹಾಸ್ಟೆಲ್ ಸೌಲಭ್ಯಹೊಂದಿರುವ ಮಕ್ಕಳನ್ನು ಹೊರತುಪಡಿಸಿ) 5,32,394 ಮಕ್ಕಳಿಗೆ ಒಟ್ಟು ರೂ.127.24 ಕೋಟಿಗಳ ವೆಚ್ಚದಲ್ಲಿ ಉಚಿತ ಬೈಸಿಕಲ್ ವಿತರಿಸಲಾಗಿದೆ.

2010–11 ಮತ್ತು 2011–12ನೇ ಸಾಲಿನ ಬೈಸಿಕಲ್‌ಗಳನ್ನು 2011–12ನೇ ಸಾಲಿನಲ್ಲಿ ಒಂದೇ ಬಾರಿಗೆ 10,77,412 ಫಲಾನುಭವಿಗಳಿಗೆ ಒಟ್ಟು ರೂ 297.62 ಕೋಟಿಗಳ ವೆಚ್ಚದಲ್ಲಿ ವಿತರಣೆ ಮಾಡಲಾಗಿದೆ. ವರ್ಷವಾರು ಮಾಹಿತಿಯನ್ನು ಕೆಳಗೆ ನಮೂದಿಸಿದೆ .

2010–11ನೇ ಸಾಲಿಗೆ ರೂ.150.00 ಕೋಟಿಗಳ ವೆಚ್ಚದಲ್ಲಿ 269095 ಹೆಣ್ಣು ಮಕ್ಕಳಿಗೆ ಮತ್ತು 273905 ಗಂಡು ಮಕ್ಕಳಿಗೆ ಒಟ್ಟು ಸರ್ಕಾರಿ ಮತ್ತು ಅನುದಾನಿತ ಶಾಲೆಗಳ 8ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಎಲ್ಲಾ ಮಕ್ಕಳಿಗೆ (ನಗರಪಾಲಿಕೆ ವ್ಯಾಪ್ತಿಯಲ್ಲಿನ ಶಾಲೆಗಳ ಮಕ್ಕಳನ್ನು ಹಾಗೂ ಬಸ್ ಪಾಸ್ ಮತ್ತು ಹಾಸ್ಟೆಲ್ ಸೌಲಭ್ಯಹೊಂದಿರುವ ಮಕ್ಕಳನ್ನು ಹೊರತುಪಡಿಸಿ) 5,43,000 ಮಕ್ಕಳಿಗೆ ಉಚಿತ ಬೈಸಿಕಲ್ ವಿತರಿಸಲಾಗಿದೆ. ಘಟಕ ವೆಚ್ಚ ಹೆಣ್ಣು ಮಕ್ಕಳ ಬೈಸಿಕಲ್ ದರ ರೂ.2775/– ಮತ್ತು ಪ್ರತಿ ಗಂಡು ಮಕ್ಕಳ ಬೈಸಿಕಲ್ ದರ ರೂ.2750/–.

2011–12ನೇ ಸಾಲಿಗೆ ರೂ.147.62 ಕೋಟಿಗಳ ವೆಚ್ಚದಲ್ಲಿ 262210 ಹೆಣ್ಣು ಮಕ್ಕಳಿಗೆ ಮತ್ತು 272202 ಗಂಡು ಮಕ್ಕಳಿಗೆ ಒಟ್ಟು ಸರ್ಕಾರಿ ಮತ್ತು ಅನುದಾನಿತ ಶಾಲೆಗಳ 8ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಎಲ್ಲಾ ಮಕ್ಕಳಿಗೆ (ನಗರಪಾಲಿಕೆ ವ್ಯಾಪ್ತಿಯಲ್ಲಿನ ಶಾಲೆಗಳ ಮಕ್ಕಳನ್ನು ಹಾಗೂ ಬಸ್ ಪಾಸ್ ಮತ್ತು ಹಾಸ್ಟೆಲ್ ಸೌಲಭ್ಯಹೊಂದಿರುವ ಮಕ್ಕಳನ್ನು ಹೊರತುಪಡಿಸಿ) 5,34,412 ಮಕ್ಕಳಿಗೆ ಉಚಿತ ಬೈಸಿಕಲ್ ವಿತರಿಸಲಾಗಿದೆ. ಘಟಕ ವೆಚ್ಚ ಹೆಣ್ಣು ಮಕ್ಕಳ ಬೈಸಿಕಲ್ ದರ ರೂ.2775/– ಮತ್ತು ಪ್ರತಿ ಗಂಡು ಮಕ್ಕಳ ಬೈಸಿಕಲ್ ದರ ರೂ.2750/–.

ಈ ಯೋಜನೆಯು ರಾಜ್ಯ ಸರ್ಕಾರದ ಯೋಜನೆಯಾಗಿರುವುದರಿಂದ ಅನುದಾನವನ್ನು ಸಂಪೂರ್ಣವಾಗಿ ರಾಜ್ಯ ಸರ್ಕಾರವೇ ಭರಿಸುತ್ತಿದೆ.